(ಶ್ರೀ ಎ. ಭೀಮಪ್ಪನಾಯಕ್.)

ನ್ನನ್ನೇ ಆಗಲಿ, ಆ ಹುದ್ದೆಗ ಅರ್ಥ ಮಾಡಿಕೊಳ್ಳುವುದಕ್ಕೆ ತಾನೇ ಹೇಗೆ ಸಾಧ್ಯ ?

ಒಬ್ಬ ಸದಸ್ಯರು.—ಅದಕ್ಕೆ ನಿಮ್ಮ ಅಭಿಪ್ರಾಯ ವೇನು ?

ಶ್ರೀ ಎ. ಭೀಮಪ್ಪನಾಯಕ್.—ನನ್ನ ಅಭಿಪ್ರಾಯದಲ್ಲಿ, ಸಧ್ಯಕ್ಕೆ ಈಗಿನಂತೆ ಇಂಗ್ಲೀಷ್ ಇರಲೇಬೇಕು. ಇಂದು ನಮ್ಮ ದೃಷ್ಟಿ ಇಡೀ ಜಗತ್ತಿನಕಡೆಗಿದೆ. ಭಾರತ ಒಂದೇ ನಮ್ಮ ದೃಷ್ಟಿಯಲ್ಲಲ್ಲ, ಹಿಂದೀ ನಮ್ಮ ರಾಷ್ಟ್ರ ಭಾಷೆ; ಇಂಗ್ಲೀಷು ಅಂತರರಾಷ್ಟ್ರೀಯ ಭಾಷೆ; ಕನ್ನಡ ನಮ್ಮ ಮಾತೃಭಾಷೆ-ಇವು ಮೂರನ್ನೂ ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ತಿಳಿದುಕೊಳ್ಳುವುದೆಂದರೆ ಕರತಲರಾಮಲಕವಾಗಿ ತಿಳಿದುಕೊಳ್ಳಬೇಕು. ಅದು ಬಿಟ್ಟು ಒಂದನೆಯ ಕ್ಲಾಸಿನಲ್ಲಿ cat, rat, hat, mat ಎಂದು ಕಲತುಕೊಳ್ಳುವುದು ; ಎರಡನೆಯ ಕ್ಲಾಸಿನಲ್ಲಿ 'Cat is an animal, it has two eyes' ಎಂದು ಇಷ್ಟನ್ನು ಮಾತ್ರ ಕಲಸುವುದು, ಇವುಗಳಿಂದ ಏನು ಪ್ರಯೋಜನ ! ಮುಂದೆ ಹೈಸ್ಕೂಲಿಗೆ ಹೋದರೆ ಆತನಿಗೇನು ಹೇಳಿಕೊಡುವುದು ! ಅಲ್ಲ ಬೇರೆ ನಾನಾ ವೃತ್ತಿಗಳು ನಾನಾ ಸ್ಪೆನ್ಸ್ ಶಿಕ್ಷಣಗಳು ಎಂದು ಹೇಳಿದರೆ, ಇದುವರೆಗೂ ಆತನಿಗೆ ಅಲ್ಪಸ್ವಲ್ಪ ಸಿಕ್ಕಾತ್ತಿದ್ದ ವಿಜ್ಞಾನ ಶಾಸ್ತ್ರವೂ ಇಲ್ಲದ ಹಾಗಾಗುತ್ತದೆ. ಯಾವುದೂ ನರಿಯಾಗಿ ಬಾರದಹಾಗಾಗುತ್ತದೆ. ಒಂದು ವೇಳೆ ಸ್ವಲ್ಪಮಟ್ಟಿಗೆ ಪಾಠಗಳು overlap ಆಗುತ್ತಿದ್ದರೂ ನಷ್ಟವಿರಲಲ್ಲ. ಕಂಠಪಾಠಮಾಡಿದ ಹಾಗಾಗುತ್ತಿತ್ತು. ಚಿಕ್ಕವಯಸ್ಸಿನಲ್ಲಿ – Receptive age ನಲ್ಲಿ ಒಳ್ಳೊಳ್ಳೆಯ ವಿಷಯಗಳನ್ನು ಹೇಳಿಕೊಟ್ಟು ಕಂಠಪಾಠ ಮಾಡಿಸುತ್ತಿದ್ದರು. ಈಗ ಏನು ಮಾಡುತ್ತಾನೆ ! ತಂದೆಯು ಜೊತೆಗೆ ಆತ ಒಂದು ಎಮ್ಮೆಯನ್ನು ಹಿಡಿದುಕೊಂಡು ಮೇಯಿಸುತ್ತಿದ್ದರೆ ಈತನೂ ಒಂದು ಎಮ್ಮೆಯನ್ನು ಹಿಡಿದುಕೊಂಡು ಮೇಯಿಸಲು ಹೋಗುತ್ತಾನೆ, ಅಷ್ಟೆ. ಹೀಗೆ ಮಾಡಿ ಆ ಎಳೆ ವಯಸ್ಸಿನ ಮಗುವಿನ ಮೆದುಳಿನ ಶಕ್ತಿಯನ್ನು ಏಕೆ ವ್ಯರ್ಥಾ ಕಳೆಯುತ್ತೀರಿ ? ಇದನ್ನು ತಾವು ಕೂಲಂಕಷವಾಗಿ ಯೋಚನೆ ಮಾಡಿ.

(The Minister for Law and Education was not found in his seat.)

Mr. SPEAKER.—It seems to me that it is the desire of several members of this House that the concerned Minister should be present when a debate on this important motion is going on. I sent word to the concerned Minister. He has not come back. Unless he is here, I do not think the House is in a mood to go on with further discussion. I therefore adjourn the House till 3-30. The House will rise for lunch and meet at 3-30.

The House rose for Lunch at Twenty-five Minutes past Two of the Clock and reassembled at Thirty Minutes past Three of the Clock.

[Mr. SPEAKER in the Chair.]

Sri H. SIDDAVEERAPPA (Minister for Home and Industries).—Sir, I beg to bring to your kind notice that my colleague the Minister for Law and Education is busy in the other House because he is in charge of an important motion. He will be coming here within about 15 minutes or half an hour at the most. In the meanwhile, with your kind permission I will follow the discussion, I will note down the points.

Mr. SPEAKER.—If the House has no objection.

Sri J. MOHAMED IMAM (Jagalur).—We are going to take the suggestion of the Revenue Minister. Till the Minister for Education comes, we may take some other work and he suggested that we may continue discussion on the Village Offices Bill.

Mr. SPEAKER.—If the House gives consent to take up the Village Offices Bill, we can take it up.

(Several Members: Yes.)

Yes. That can be done in the meanwhile.

MYSORE VILLAGE OFFICES (AMENDMENT) BILL, 1953.

Motion to consider—(continued).

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ಪೀಕರ್, ಈಗಾಗಲೇ ಮೈನೂರು ಸಂಸ್ಥಾನದ ಗ್ರಾಮನಿವರಿಗೆ ಸಂಬಂಧಪಟ್ಟ ತಿದ್ದುಪಡಿ ಮಸೂದೆ ನಮ್ಮ ಮುಂದೆ ಬಂದು ಚರ್ಚೆಯಾಗಿದೆ. ಇದರಲ್ಲಿ 9 (a) ನಿಬಂಧನೆಯಿಂದ ಶ್ಯಾನುಭೋಗರು ಮತ್ತು ಪಟೇಲರುಗಳಿಗೆ ಅಜನ್ಮಸಿದ್ಧವಾದ ಯಾವ ಹಕ್ಕುದೆಯೋ ಆ ಹಕ್ಕಿಗೆ ಧಕ್ಕೆ ಬರಬಹುದೆಂಬ ನಿಜಾಂಶ ಎದ್ದು ಕಾಣುತ್ತದೆ. ಪಟೇಲರು ಯಾರು, ಸರ್ಕಾರಕ್ಕೂ ಅವರಿಗೂ ನಂಬಂಧವೇನಿದೆ ಎಂಬುದನ್ನು ತಿಳಿಯದೆ ಮಾಡಿರುವ ಈ ಮಸೂದೆ ಸರ್ಕಾರದ ಉಳಿವಿಗೇ ಕಷ್ಟಬಂದು ಸರ್ಕಾರದ ಪರಿಸ್ಥಿತಿ ಹದಗೆಡಬಹುದೆಂಬ ಶಂಕೆ ತರುತ್ತದೆ. ಏಕೆಂದರೆ ಯಾವ ಕಾನೂನನ್ನು ಜಾರಿಗೆ ತರಬೇಕಾದರಾಗಲಿ ಅಥವಾ ಯಾವ ಹಣ ಕಾಸಿನ ವಸೂಲಿಯೇ ಆಗಬೇಕಾಗಲಿ ಗ್ರಾಮಾಂತರ ಗಳಲ್ಲಿ ಇವರುಗಳ ನೆರವು ಅಗತ್ಯ. ಇದು ಸತ್ಯಾಂಶ. ಇದನ್ನು ಬ್ರಿಟಿಷ್ ಸರ್ಕಾರದವರು ಚೆನ್ನಾಗಿ ಮನಗಂಡಿದ್ದರು. ಆದ್ದರಿಂದಲೆ ಅವರು ಪ್ರತಿಯೊಂದು ಹಳ್ಳಿಯಲ್ಲೂ ಗಣ್ಯ ಮಹನೀಯರು ಯಾರಿದ್ದಾರೋ ಅಂಥವರಿಗೆ ಮಾತ್ರ ಪಟೇಲ್ ಶ್ಯಾನುಭೋಗಿಕೆಗಳನ್ನು ಕೊಟ್ಟರು. ಅವರು

ಗೌರವಸ್ಥರೆಂಬ ದೃಷ್ಟಿಯಿಂದ ಅವರಿಗೆ ಈ ಸ್ಥಾನಮಾನ ಗಳು ಸಿಕ್ಕಿದ್ದವು. ಅಷ್ಟೇ ಹೊರತು, ಬತ್ಯ ಸಿಕ್ಕುತ್ತ ದೆಂಬ ಆಸೆಯಿಂದ ಅವರಾರೂ ಬಂದಿರಲ್ಲ, ಸರ್ಕಾರ ದವರೂ ಅವರ ವಿಷಯದಲ್ಲಿ ಆ ಭಾವನೆಯನ್ನಿಟ್ಟಿರ ಲಿಲ್ಲ.

ಆದರೆ ಈ ಬಿಲ್ಲಿನ ದೆಸೆಯಿಂದ ಅವರು ಭತ್ಯಕ್ಕಾಗಿ ಜೀವಿಸುತ್ತಿರುವ ಪ್ರಾಣಿಗಳೆಂದು ಒಂದು ಭಾವನೆ ಯನ್ನು ತೋರ್ಪಡಿಸಿರುವಂತೆ ಕಾಣುತ್ತದೆ. ಹೀಗಾಗಿ ಅವರು ಗಣ್ಯವಾಹನೀಯರೆಂಬ ಭಾವನೆಗೇ ಸರ್ಕಾರ ದವರು ಧಕ್ಕೆ ತಂದಂತಾಗಿದೆ. ಆದ್ದರಿಂದ ಈ ರೀತಿ ಯಾದ ಒಂದು ತಿದ್ದುಪಡಿಯನ್ನು ತಂದು ಅವರ ವ್ಯಕ್ತಿ ತ್ವಕ್ಕೇ ರೋಪ ತರುವುದು ಸರ್ಕಾರದ ಘನತೆಗೆ ತಕ್ಕು ದಲ್ಲ. ಈ ದೃಷ್ಟಿಯಿಂದ ಈ ಮಸೂದೆಯಲ್ಲಿರತಕ್ಕ 9 (a) ಸೆಕ್ಷನ್ನನ್ನು delete ಮಾಡುವುದು ಯುಕ್ತ ವೆಂದು ನಾನು ಒತ್ತಾಯವಾಗಿ ಹೇಳಬಯಸುತ್ತೇನೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲ್).— ಈಗ ವಿರೇಜ್ ಆಫೀಸರ್ಸ್ ಬಿಲ್ಲಿನ ವಿಷಯದಲ್ಲಿ ಬಂದಿ ರುವ ಸೆಲೆಕ್ಟ್ ಕಮಿಟಿಯ ವರದಿಯು ನಮ್ಮ ಪರಿಶೀಲ ನೆಗೆ ಬಂದಿದೆ. ಈ ವರದಿಯಲ್ಲಿ 3ನೆಯ ಕ್ಲಾಸಿನ ಕೆಳಗೆ 9 (a) ಸೆಕ್ಷನ್ನನ್ನು ಸೇರಿಸಿರುವುದರಲ್ಲಿ ಅವರೇನು ಅಭಿ ಪ್ರಾಯವನ್ನು ವ್ಯಕ್ತಪಡಿಸಿದ್ದಾರೋ, ಯಾರಿಗೆ ಸ್ಥಿರ ಆಸ್ತಿಗಳಿಲ್ಲವೋ ಅಂಥ ಪಟೇರ್ ಶ್ಯಾನುಭೋಗರು ಗಳಿಂದ ಡಿಪಾಜಿಟ್ ತೆಗೆದುಕೊಳ್ಳಬೇಕೆಂದು ಏನು ಸೂಚಿಸಿದ್ದಾರೋ ಅದರ ಸೂಕ್ತತೆ ನಮಗೆ ಅಷ್ಟೇನೂ ಅರ್ಥವಾಗುವುದಿಲ್ಲ. ಏಕೆಂದರೆ, ಇದುವರೆಗೂ ಸರ್ಕಾರ ದವರು ಪಟೇರ್ ಶ್ಯಾನುಭೋಗರಲ್ಲಿ ಎಷ್ಟು ಜನರು ಸ್ಥಿರ ಆಸ್ತಿಯಿಲ್ಲದಿರುವವರಿದ್ದಾರೆಂಬಅಂಕಿ ಅಂಶವನ್ನು ಸಂಗ್ರಹಿಸಿದ್ದಾರೆಯೇ? ಮತ್ತು ಪಟೇರ್ ಶ್ಯಾನುಭೋ ಗರು ತಮ್ಮ ಗೌರವಕ್ಕೆ ಅಷ್ಟು ಗಮನಕೊಡದೆ ಹಣ ಕಾಸನ್ನು ದುರುಪಯೋಗಪಡಿಸಿಕೊಂಡು ತಮ್ಮ ಗೌರವ ವನ್ನು ಹಾಳುಮಾಡಿಕೊಳ್ಳುವ ಮನೋಭಾವವುಳ್ಳವರಾಗಿ ದ್ದಾರೆಯೇ ಎಂಬುದನ್ನೂ ತಾವು ಯೋಚನೆ ಮಾಡಬೇಕು. ಸಾಮಾನ್ಯವಾಗಿ ಎಲ್ಲಾ ಪಟೇರ್ ಶ್ಯಾನುಭೋಗರೂ ತಮ್ಮ ಹುದ್ದೆಯನ್ನು ಒಂದು ಗೌರವದ ಸ್ಥಾನವೆಂದು ಭಾವಿಸಿ ಅನೋಚಾನವಾಗಿ ಬಂದಿರತಕ್ಕ ಈ ಹಕ್ಕನ್ನು ಉಳಿಸಿಕೊಳ್ಳಬೇಕೆಂದು ಇಷ್ಟುವರೆಗೂ ಕೆಲಸಕಾರ್ಯಗಳ ನ್ನು ಮಾಡಿಕೊಂಡು ಬಂದಿದ್ದಾರೆಯೇ ಹೊರತು ತಾವು ಕೊಡುವ ಪೋಟೆಗೆಗಾಗಿಯಾಗಲಿ ಅಥವಾ ಬೇರೆ ಷಿಥ ವಾದ ಅನುಕೂಲಗಳನ್ನು ಹೊಂದುವುದಕ್ಕಾಗಲಿ ಮಾಡು ತ್ತಾ ಬರುತ್ತಿಲ್ಲ. ಅವರು ಸರ್ಕಾರದ ಹಣವನ್ನು ಮೊದಲಿನಿಂದಲೂ ಜೋಪಾನವಾಗಿ ನೋಡಿಕೊಂಡು ಇನ್ನಾವ ನೌಕರರೂ ಸರ್ಕಾರಕ್ಕೆ ಸಲ್ಲಿಸಿರುವ ಹಾಗೆ ತಪ್ಪದೆ ಸಲ್ಲಿಸಿಕೊಂಡು ಬಂದಿದ್ದಾರೆ.

ಅಲ್ಲದೆ ನಿನ್ನೆ ದಿವಸ ಕೆಲವು ಮಾನ್ಯ ಸದಸ್ಯರು ವ್ಯಕ್ತ ಪಡಿಸಿದ ಹಾಗೆ ಪಟೇರ್ ಶ್ಯಾನುಭೋಗರಲ್ಲ ಹಣದ ವಿಷಯದಲ್ಲಿ ಪೂರ್ಣ ಜವಾಬ್ದಾರಿ ಪಟೇಲರಿಗಿದೆಯೇ ಹೊರತು ಶ್ಯಾನುಭೋಗರಿಗಿಲ್ಲವೆಂದು ಎಲ್ಲರಿಗೂ ಗೊತ್ತಿ ರುವುದೇ ಆಗಿದೆ. ಯಾರಿಗೆ ಜವಾಬ್ದಾರಿ ಹೆಚ್ಚಾಗಿ ದೆಯೋ ಆತ ಅಷ್ಟು ವಿದ್ಯಾವಂತನಾಗಿಲ್ಲದಿರಬಹುದು. ಇಲ್ಲದಿದ್ದರೂ ಸಹ ಆತನು ಗೌರವಯುತನಾಗಿ ತನ್ನ ಕಾರ್ಯವನ್ನು ಸಲ್ಲಿಸಿಕೊಂಡು ಬಂದಿದ್ದಾನೆ. ಹೀಗಿರು ವಾಗ ಸ್ಥಿರ ಆಸ್ತಿ ಇರಬೇಕು, ಇಲ್ಲದಿದ್ದರೆ ಕಾಲು ಭಾಗ ದಷ್ಟು ಹಣವನ್ನು ಡಿಪಾಜಿಟ್ ಮಾಡಬೇಕು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಇನ್ನೂ ಒಂದು ಅಂಶವೇ ನೆಂದರೆ, ಈಗಿರುವ ಶ್ಯಾನುಭೋಗ ಪಟೇಲರುಗಳಲ್ಲಿ 100 ಕ್ಕೆ 99 ಪಾಲು ಜನರು ಆಸ್ತಿಯಿರುವವರೇ ಆಗಿ ದ್ದಾರೆ. ಅಂಥಾದ್ದರಲ್ಲೂ ಇಂಥ ಒಂದು ಬಿಲ್ಲನ್ನು ತಂದರೆ ನಾವೇ ಅವರ ವಿಷಯದಲ್ಲಿ ಇಲ್ಲದಿರುವ ಒಂದು ತಪ್ಪು ಅರ್ಥವನ್ನು ಕಲ್ಪನೆ ಮಾಡಿದಂತಾಗುತ್ತದೆ.

ಅಲ್ಲದೆ ನಿನ್ನೆ ದಿನ ಶ್ರೀ ರಾಮರಾಯರು ಬೇರೊಂದು ಸಂದರ್ಭದಲ್ಲಿ ಮಾತನಾಡುತ್ತಾ, ಹೆಚ್ಚಿನ ಅಧಿಕಾರವನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕೊಟ್ಟರೆ ಅವರು ಹೇಗೆ ದುರುಪಯೋಗಪಡಿಸುತ್ತಾರೆಂದು ಹೇಳಿ ದರು. ಹೀಗಿರುವಾಗ ಈ ಬಿಲ್ಲನ್ನು ಪಾಸು ಮಾಡಿ ಈ ಅಧಿಕಾರವನ್ನು ಅವರ ಕೈಯಲ್ಲಿಡುವುದು ಸೂಕ್ತವೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಒಂದು ವೇಳೆ ಇವರುಗಳ ಮೇಲೆ ಹತೋಟಿಯಿರಬೇಕೆಂದರೆ, ಈಗಾ ಗಲೇ ವಿಲೇಜ್ ಆಫೀಸರ್ಸ್ ಆಕ್ಟ್ ಮತ್ತು ಪೋಲೀಸ್ ಆಕ್ಟ್‌ಗಳು ಇದ್ದೇ ಇವೆ. ಹೀಗಿರುವಾಗ ಪರ್ಸನಲ್ ಕ್ಯಾಷ್ ಸೆಕ್ಯೂರಿಟಿ ಕಟ್ಟಬೇಕೆಂದು ಹೇಳುವುದರಲ್ಲಿ ಅರ್ಥ ವಿಲ್ಲ. ಇದನ್ನು delete ಮಾಡುವುದು ಒಳ್ಳೆಯದೆಂದು ಹೇಳಿ ಸೆಲೆಕ್ಟ್ ಕಮಿಟಿಯವರ ರಿಪೋರ್ಟಿನಲ್ಲಿ ಮೊದಲ ನೆಯ ಭಾಗವನ್ನು ಮಾತ್ರ ಒಪ್ಪಿಕೊಂಡು ಕೊನೆಯ ಭಾಗವನ್ನು ಬಿಟ್ಟುಬಿಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಆರಕಲಗೂಡು).— ಸ್ವಾಮಿ, ಈಗ ಸೆಲೆಕ್ಟ್ ಕಮಿಟಿಯವರು ನಮ್ಮ ಮುಂದೆ ಇಟ್ಟಿರತಕ್ಕ ಈ ವರದಿಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ನಿನ್ನೆ ದಿನ ನನ್ನ ಮಿತ್ರರು ಕೆಲವರು ಮತ್ತು ಈಗ ಮಾತನಾಡಿದ ಶ್ರೀ ಮೂಡಲಗಿರಿಗೌಡರು ಮತ್ತು ವಿರೋಧಪಕ್ಷದ ಕೆಲವು ಸ್ನೇಹಿತರೂ ಕೂಡ ಇದನ್ನು ತೀವ್ರವಾಗಿ ವಿರೋಧಿಸಿ ದ್ದಾರೆ. ಒಂದನೆಯ ಕ್ಲಾಸಿನಲ್ಲಿ 7ನೆಯ ಪ್ರಕರಣಕ್ಕೆ ಸೂಚಿಸಿರುವ ಪ್ರೊವೈಸೋವನ್ನು ಅದು ಸರಿಯಲ್ಲ ಮತ್ತು ಅದರ ಅವಶ್ಯಕತೆಯಿಲ್ಲವೆಂದು ಅವರು ವಾದಿಸಿ ದರು. ಹಣವನ್ನು ಎಷ್ಟು ಜನ ಪಟೇರ್ ಶ್ಯಾನುಭೋ ಗರುಗಳು ದುರುಪಯೋಗಮಾಡಿಕೊಂಡಿದ್ದಾರೆ, ಎಷ್ಟು ಜನ ಕಂದಾಯದ ಹಣವನ್ನು ತಿಂದುಹಾಕಿದ್ದಾರೆ ಎಂಬ ವಿವರಗಳು ನಮ್ಮ ಮುಂದಿಲ್ಲದಿರುವುದರಿಂದ ನಾವಿದನ್ನು ಒಪ್ಪುವುದಕ್ಕಾಗುವುದಿಲ್ಲವೆಂಬುದು ಅವರ ವಾದ ವಾಗಿತ್ತು. ಆದರೆ ಶ್ರೀ ವೆಂಕಟಪ್ಪನವರಿಗೇ ಆಗಲಿ ಮತ್ತು ಇದನ್ನು ವಿರೋಧಿಸಿದ ನಮ್ಮ ಮಾನ್ಯ ಸ್ನೇಹಿತರಿಗಾಗಲಿ ವಿಲೇಜ್ ಆಫೀಸರುಗಳು ಹಣವನ್ನು ದುರುಪಯೋಗಮಾಡಿ ಕೋರ್ಟಿನಲ್ಲಿ ಕೇಸುಗಳು ನಡೆದು ಅನೇಕರಿಗೆ ಶಿಕ್ಷೆಯಾಗಿರುವ ಸಂದರ್ಭಗಳು ತಿಳಿಯದೆ ಇಲ್ಲ.

ಒಬ್ಬ ಸದಸ್ಯರು.—ಎಷ್ಟು ಪರ್ಸೆಂಟೇಜು?

ಶ್ರೀ ಜಿ. ಎ. ತಿಮ್ಮಪ್ಪಗೌಡ.— ಶೇಕಡ 5, 6 ರಷ್ಟು ಇದ್ದರೂ ಸಾಕು. ಅದು ಪಾಸ್ತವವಾಗಿ ಇರತಕ್ಕ ಅಂಶವೆಂಬುದು ಎಲ್ಲರಿಗೂ ಗೊತ್ತಿದೆ. ಆದರಲ್ಲೂ ಕೂಡ ಅವರು ಹಣವನ್ನು ದುರುಪಯೋಗಪಡಿಸಿಕೊಂಡಾಗ ಅವರ ದುರ್ವರ್ತನೆ, ದುರ್ನಡತೆ ಗುರುತರವಾಗಿದ್ದ ಪಕ್ಷದಲ್ಲಿ ಮಾತ್ರ ಜಿಲ್ಲಾಧಿಕಾರಿಗಳು ಮನಸ್ಸಿಗೆ ಸೂಕ್ತ ವಾದ ಮಟ್ಟಿಗೆ ಸಮಾಧಾನ ಮಾಡಿಕೊಂಡೇ ಅಂಥ ಗ್ರಾಮನೌಕರರನ್ನು ಸಸ್ಪೆಂಡ್ ಮಾಡಬಹುದೆಂದು ಈ ತಿದ್ದುಪಡಿಯಲ್ಲಿ ಹೇಳಿರುವುದು ಸೂಕ್ತವಾಗಿದೆ. ಈಗಲೂ ಕೂಡ ಕಾನೂನಿನಲ್ಲಿಲ್ಲದಿದ್ದರೂ "ಇತರ ಕಾರಣಗಳಿ ಗಾಗಿ" ಎಂಬ ಒಂದು ಕಲಮನ್ನು ಉಪಯೋಗಿಸಿ ಕೊಂಡು ಜಿಲ್ಲಾಧಿಕಾರಿಗಳು, ಸಬ್‌ಡಿವಿಜ಼ನ್ ಆಫೀಸರು ಗಳು ಮತ್ತು ಅಮಲ್ದಾರರುಗಳು ಗ್ರಾಮಾಧಿಕಾರಿ ಗಳನ್ನು ಸಸ್ಪೆಂಡ್ ಮಾಡುತ್ತಿದ್ದಾರೆ. ಅಂಥಾದ್ದನ್ನು ಈ ರೀತಿ ತಿದ್ದುಪಡಿ ತಂದು legalise ಮಾಡಿರುವುದು

(ಶ್ರೀ ಬಿ. ಎ. ತಿಮ್ಮಪ್ಪ ಗೌಡ.)

ಹೆಚ್ಚೇನೂ ಅಲ್ಲ. ಇರತಕ್ಕ ಪರಿಸ್ಥಿತಿಗೆ ಕಾನೂನಿನ ಬಲ ಬಂದಿದೆ, ಅಷ್ಟೆ. ಒಂದು ಪಕ್ಷದಲ್ಲಿ ಆ ಗ್ರಾಮ ನಿವಾಸರ ಹಿತದೃಷ್ಟಿಯಿಂದ ಈ ರೀತಿ ಕಾನೂನಿನ ಬಲ ಕೊಟ್ಟಿರುವುದು ಒಳ್ಳೆಯದೆಂದು ನಾವು ಒಪ್ಪಿಕೊಳ್ಳಬೇಕು. ಸಾರ್ವಜನಿಕರಲ್ಲಿಯೂ ಕೂಡ public opinion ಯಾವ ರೀತಿಯಿದೆ ಎಂಬುದು ಗೊತ್ತೇ ಇದೆ. ಅಲ್ಲಲ್ಲಿ ಹಣ ದುರುಪಯೋಗವಾಗುತ್ತಿರುವುದಕ್ಕೆ ಸರ್ಕಾರದವರು ಸರಿಯಾದ ಬಂದೋಬಸ್ತು ಮಾಡಬೇಕೆಂದು ಹೇಳುತ್ತಿರುವುದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಈ ತಿದ್ದುಪಡಿ ಸೂಕ್ತವಾಗಿದೆ; ಅದು ಇರಲೇ ಬೇಕೆಂದು ಹೇಳಿದ್ದಾರೆ.

ಇನ್ನು 9 (a) ಸೆಕ್ಷನ್ನಿನ ವಿಚಾರದಲ್ಲಿ ಸ್ವಲ್ಪ ತಕರಾರು (controversy) ಇದೆ. ಒಂದು ದೃಷ್ಟಿಯಿಂದ 9 (a) ಕೂಡ ಇರತಕ್ಕದ್ದು ಅವಶ್ಯಕವೆಂದು ನನಗೆ ತೋರಿದರೂ ಕೂಡ ಅದರಲ್ಲಿ wordings ಇರುವ ರೀತಿಯಲ್ಲಿ ನಾನದನ್ನು ಒಪ್ಪಲಾರೆ. ಅದರಲ್ಲಿ "Not being a person who owns any immovable property" ಎಂದು ಹೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ಒಂದು ಮನೆ, ಅಥವಾ ಒಂದು ಹಲಸಿನ ಮರ ಕೂಡ immovable property ಎಂದು ಭಾವಿಸಿ ಈ ಕ್ಲಾಜನ್ನು evade ಮಾಡುವುದಕ್ಕೆ ಅವಕಾಶವಾಗುತ್ತದೆ ಹೀಗಾಗಿ 'ಈ ಕ್ಲಾಜಿನಿಂದ ಏನೂ ಪ್ರಯೋಜನವಾಗುವುದಿಲ್ಲ, ಆದ್ದರಿಂದ ಇದರಲ್ಲಿ wordings ಇರುವ ರೀತಿಯಲ್ಲಿ ಇದನ್ನು ಒಪ್ಪುವುದಕ್ಕಾಗುವುದಿಲ್ಲ, ಸೂಕ್ತರೀತಿಯಲ್ಲಿ ಬದಲಾವಣೆ ಮಾಡಿದರೆ ಒಪ್ಪಿಕೊಳ್ಳಬಹುದು ಎಂದು ಕೆಲವರು ಅಭಿಪ್ರಾಯಪಟ್ಟರು. ಇನ್ನು ಕೆಲವರು 'immovable' ಎಂದು ಇರುವ ಪದವನ್ನೇ ಬಿಟ್ಟುಬಿಡಿ ಎಂದು ಹೇಳಿದರು. "substantial and sufficient immovable property" ಎಂದು ಹಾಕಿದರೆ ಸರಿಹೋಗತ್ತದೆಂದು ಬೇರೊಂದು ಸೂಚನೆ ಬಂತು. ಅದೂ ನನ್ನ ಅಭಿಪ್ರಾಯದಲ್ಲಿ ಸರಿಹೋಗುವುದಿಲ್ಲ. ಏಕೆಂದರೆ ನಾಳೆ ದಿವಸ ಕೋರ್ಟುಗಳಿಗೆ ಹೋಗಿ ಅದನ್ನು interpret ಮಾಡಬೇಕಾಗುವ ಅವಶ್ಯಕತೆ ಬರುತ್ತದೆ. ಆದ್ದರಿಂದ ಸದ್ಯಕ್ಕೆ ಆ ಕ್ಲಾಜನ್ನು ಬಿಟ್ಟು ಮೊದಲನೆಯ ಕ್ಲಾಜನ್ನು ಮಾತ್ರ ಇಟ್ಟುಕೊಂಡು ಈ ಬಿಲ್ಲನ್ನು ಪಾಸು ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ನನ್ನ ಮಾನ್ಯ ಸ್ನೇಹಿತರಾದ ಶ್ರೀ ತಿಮ್ಮಪ್ಪಗೌಡರ ವಾದವನ್ನು ಕೇಳಿದೆ. ಬಹುಶಃ ನಿನ್ನೆ ಅವರು ಮಾತನಾಡಿದ್ದಿದ್ದರೆ ಈ ದಿನ ಮಾತನಾಡಿದ ಹಾಗೆ ಮಾತನಾಡುತ್ತಿರಲಿಲ್ಲವೆನ್ನಿಸುತ್ತದೆ. ಅವರು ನಿಧಾನಿಗಳು ಮತ್ತು ದೂರಾಲೋಚನೆಮಾಡುವವರು. ಮೂರು ತಿಂಗಳಿಗೊಮ್ಮೆ ಸಭೆ ಸೇರುತ್ತದೆ, ಬೇಕಾದರೆ ತಿದ್ದುಪಡಿ ಮಾಡಬಹುದು. ಈಗ ಅವರು ಹೇಳುವುದನ್ನೇ ಒಪ್ಪಿಕೊಳ್ಳೋಣ. ಆದರೆ ಒಪ್ಪಿಕೊಂಡರೆ, ಈ ಬಿಲ್ಲಿನ ಗತಿ ಏನಾಯಿತು? ಬೆಟ್ಟ ಅಗೆದು ಒಂದು ಇಲಿಯನ್ನು ಹಿಡಿದ ಹಾಗಾಗುತ್ತದೆ. ಅವರು ಇದರಲ್ಲಿರುವ 9-A ಕ್ಲಾಜನ್ನು ತೆಗೆದುಹಾಕೋಣ, 7ನೆಯ ಸೆಕ್ಷನ್ನಿನ ಪ್ರೊವಿಸೊ ಅನಾವಶ್ಯಕ, ಈಗಿರುವ 'ಕಾನೂನಿನಲ್ಲೇ ಈ ಅಧಿಕಾರವಿದೆ ಎಂದು ಹೇಳಿದರು. ಈಗಿರುವ ಕಾನೂನಿನಲ್ಲಿ ಎಕ್ಕೆಸ್ಟ್ರಿಂಡಾಗಿ ಸಪ್ಲೆಂಡ್ ಮಾಡಬೇಕೆಂದಿದೆ. ಏಷ್ಟುಮಟ್ಟಿಗೆ ವಿಚಾರಣೆ ಬೇಕೆಂಬುದೇನೂ ಇಲ್ಲ. ಸಾಕಷ್ಟು ವಿಚಾರಣೆಮಾಡಿ ಸಸ್ಪೆಂಡ್ ನಲ್ಲಿಟ್ಟುಬಹುದು. ಆದುದರಿಂದ ಮಾನ್ಯ ಸದಸ್ಯರ ಅಭಿಪ್ರಾಯದ ಪ್ರಕಾರ 7ನೆಯ ಸೆಕ್ಷನ್ ಅನಾವಶ್ಯಕ; 9-A ಬೇಕಾಗಿಲ್ಲ. ಹೀಗೆ ಒಂದು ತಿದ್ದುಪಡಿ ತಂದು, ಚರ್ಚೆಯಾಗಿ, ಅನಂತರ ಆತುರವಾಗಿ ಒಪ್ಪಿಕೊಂಡರೆ ಸರಿಯಲ್ಲವೆಂದು ಸೆರೆಕ್ಟ್ ಕಮಿಟಿಗೆ ಕಳುಹಿಸಿ, ಆ ಸಮಿತಿಯ ಅಭಿಪ್ರಾಯದ ಮೇಲೆ ಒಂದು ದಿನ ಚರ್ಚೆ ಮಾಡಿ, ದೀರ್ಘವಾಗಿ ಆಲೋಚನೆಮಾಡಿ ಈಗ ಏನೂ ಬೇಡ ಎಂದು ಹೇಳಿದರೆ, ಈ ಸಭೆಯಲ್ಲಿ ನಡೆದ ನಡೆವಳಿಕೆಗಳೆಲ್ಲಾ ವ್ಯರ್ಥ ಎಂಬ ಅಭಿಪ್ರಾಯ ಬರುತ್ತದೆ.

ಈ ಸಮಯದಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕೆಂದೇಕ್ಷಿಸುತ್ತೇನೆ. ಗ್ರಾಮ ನಿವಾಸರು ಅಷ್ಟು ಸರಿಯಾಗಿ ವರ್ತಿಸುವುದಿಲ್ಲ, ಅನೇಕರು ಹಣ ದುರುಪಯೋಗ ಮಾಡುತ್ತಾರೆ, ಹಾಗೆ, ಹೀಗೆ ಎಂದು ಹೇಳಿದರು. ಗ್ರಾಮನಿವಾಸರು ಈರೀತಿ ದಾರಿ ತಪ್ಪಿನಡೆಯುವುದಕ್ಕೆ ಒಂದು ಪ್ರಬಲವಾದ ಕಾರಣವಿದೆ. ಅದನ್ನು ಸರ್ಕಾರದವರು ತಪ್ಪಿಸಬಹುದು. ಅದು ಅವರಿಗೂ ಗೊತ್ತಿದೆ. ಆದರೂ ಅವರ ಗಮನಕ್ಕೆ ತರುವುದು ಒಳ್ಳೆಯದೆನ್ನಿಸುತ್ತದೆ. ಷೇಕ್‌ದಾರರಿಂದ ಹಿಡಿದು ರೆವೆನ್ಯೂ ಕಮಿಷನರವರೆಗೆ ಎಲ್ಲ ಅಧಿಕಾರಿಗಳೂ ಎಷ್ಟು ಅಧಿಕಾರಿಗಳು ಬರಲಿ, ಅವರ ಮತ್ತು ಅವರ ಸಿಬ್ಬಂದಿಯವರ ಕ್ಯಾಂಪ್ ಖರ್ಚೆಲ್ಲವೂ ಗ್ರಾಮ ನಿವಾಸರ ಮೇಲೆ ಬೀಳುತ್ತದೆ. ಎಲ್ಲೋ ಕೆಲವು ಕಡೆ ಹೀಗಿಲ್ಲದೇ ಇರಬಹುದು. Exception ಇಲ್ಲವೆಂದು ನಾನು ಹೇಳುವುದಿಲ್ಲ. ಬಹುತೇಕವಾಗಿ ಹೀಗೆಯೇ ನಡೆಯುತ್ತದೆ. ಈ ಕಾರಣದಿಂದ ಗ್ರಾಮನಿವಾಸರು ತಮ್ಮ ಜೇಬಿನಲ್ಲಿ ಹಣವಿಲ್ಲದಿರುವಾಗ ಯಾರು ಕಂದಾಯ ತಂದುಕೊಟ್ಟರೂ ಅದನ್ನು ತಾತ್ಕಾಲಿಕವಾಗಿ ದುರುಪಯೋಗಿಸಿಕೊಳ್ಳಬೇಕಾಗುತ್ತದೆ. (ಕೆಲವರೇನೋ ಇದು ಸದ್ವಿನಿಯೋಗವೆಂದು ಹೇಳುತ್ತಾರೆ!) ಆದುದರಿಂದ ದಯಮಾಡಿ ಸರ್ಕಾರದವರು ಈ ಒಂದು ವಿಷಯದಲ್ಲಿ ಬಹಳ ಮುತುವರ್ಜಿವಹಿಸಿ ತಪ್ಪಿಸಬೇಕು. ಇದು ಸರ್ಕಾರ ವ್ಯವಸ್ಥೆಯಾದ ಕಾಲದಿಂದ ಬಂದಿರುವ ಮಾಮೂಲು; ಕೆಲವರಿಗೆ ಗೊತ್ತಿದ್ದರೂ ಗೊತ್ತಿಲ್ಲದಿರುವ ಹಾಗಿರುತ್ತಾರೆ. ಊರು ಮೇರೆ ಊರುಬಿದ್ದರೆ ಶ್ಯಾನುಭೋಗನಿಗೆ ಏನು ಸಂಕಟ! ಈಚೆಗಂತೂ ನಮ್ಮ ಅಧಿಕಾರಿಗಳ ಚಟುವಟಿಕೆ ಬಹಳ ಜಾಸ್ತಿಯಾಗಿದೆ. ಜನರಲ್ಲಿ ನಿಕಟಸಂಪರ್ಕವನ್ನಿಟ್ಟುಕೊಳ್ಳಬೇಕು ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಗಮನಕೊಡಬೇಕು; ಇದಕ್ಕಾಗಿ ಪದೇ ಪದೇ ಅವರು ಎಲ್ಲಾ ಕಡೆಯೂ ಸಂಚಾರ ಹೋಗಬೇಕಾಗಿದೆ. ಹಿಂದೆ ಷೇಕ್‌ದಾರರೂ ಕೂಡ ಹೋಗದಿದ್ದ ಅನೇಕ ಗ್ರಾಮಗಳಿಗೆ ಈಗ ಡೆಪ್ಯುಟಿ ಕಮಿಷನರೂ ಮಂತ್ರಿಗಳೂ ಹೋಗಬೇಕಾಗಿದೆ. ಆದೂ ಮಾಮೂಲಾಗಿ ಬೇರೂರಿಕೊಂಡಿರುವ ಈ ಕೆಟ್ಟ ಪದ್ಧತಿಯನ್ನು ಕಂಡುಹಿಡಿದು ನಿವಾರಣೆ ಮಾಡಲಿಲ್ಲ. ಈಗ ನಾವು ಏನು ಹೇಳಿದರೂ ಏಕಪಕ್ಷೀಯವಾದವಾಗುತ್ತದೆ. ಇಲ್ಲಿ ಪಟೇಲರೂ ಶ್ಯಾನುಭೋಗರೂ ಇದ್ದಿದ್ದರೆ ತೀವ್ರವಾಗಿ ಪ್ರತಿಭಟಿಸುತ್ತಿದ್ದರು. ಅವರನ್ನು ಬರಾತ್ಕಾರವಾಗಿ ಹಣವನ್ನು ದುರುಪಯೋಗಮಾಡುವ ಪರಿಸ್ಥಿತಿಗೆ ನೂಕಿದರೆ. ಅವರೇನುಮಾಡುತ್ತಾರೆ! ಸರ್ಕಾರದವರೇನೋ ತೀವ್ರವಾಗಿ ಸರ್ಕ್ಯುಲರ್ ಕಳುಹಿಸುತ್ತಾರೆ, ಆಜ್ಞೆಮಾಡುತ್ತಾರೆ; 'ನಾವು ನಿಮಗೆ ಟಿ. ಎ., ಡಿ. ಎ. ಕೊಡುತ್ತೇವೆ, ನಿಮ್ಮ ಕ್ಯಾಂಪ್ ಖರ್ಚನ್ನು ನೀವೇ ಹಾಕಿಕೊಳ್ಳಬೇಕು' ಎಂದು ತಿಳಿಸುತ್ತಾರೆ. ಆದರೆ ಅದು ಕಾರ್ಯರೂಪದಲ್ಲಿ ಶೇಕಡ 90ರಷ್ಟಾದರೂ ನಡೆಯುತ್ತದೆಯೇ? ಪಟೇಲ್ ಶ್ಯಾನುಭೋಗರ ಮೇಲೆ ಇಂಥ ಆರೋಪಣೆಯನ್ನು ಹೊರಿಸುವುದಕ್ಕೆ ಬದಲು ಈ ಕೆಟ್ಟ

ಪದ್ಧತಿಯನ್ನು ಹೀಗೇ ಆರೋಪಣೆ ಹೊರಿಸುವವರು ಏಕೆ ನಿರ್ಮೂಲ ಮಾಡಬಾರದು ?

ಒಟ್ಟಿನಲ್ಲಿ, ಈಗ ತಂದಿರುವ ಮಸೂದೆಯಿಂದ ಏನೂ ಪ್ರಯೋಜನವಾಗಲಿಲ್ಲವೆನ್ನಿಸುತ್ತದೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ-ಅನುಸೂಚಿತ ಜಾತಿ).—ಸ್ವಾಮಿ, ಸೆಲೆಕ್ಟ್ ಕಮಿಟಿಯವರು. ಸಭೆಯ ಮುಂದಿಟ್ಟಿರುವ ವರದಿಯು ಬಹಳ ಸಮಂಜಸವಾಗಿದೆ. ಇದರ ಹಿನ್ನೆಲೆಯಲ್ಲಿರುವ ಒಂದು ಮುಖ್ಯವಾದ ಅಂಶವನ್ನು ಸಭೆಯಮುಂದಿಡಬೇಕಾಗಿದೆ. ಅದೇನೆಂದರೆ, ಪ್ರಜೆಗಳ ಅಭಿಶ್ರೇಯಯಾವ ರೀತಿ ಇದೆಯೋ ಅದಕ್ಕೆ ತಕ್ಕಂತೆ ಕಾನೂನು ಮಾಡಬೇಕಾಗಿದೆ. feudal lords ಎಂದು ಪಾಶ್ಚಿಮಾತ್ಯ ದೇಶಗಳಲ್ಲಿದ್ದರೆಂದು ನಾವು ಕೇಳಿದ್ದೇವೆ. ಅವರು ಯಾವ ಒಂದು ನೀತಿಯನ್ನನುಸರಿಸಿಕೊಂಡು ಬಾಳುತ್ತಿದ್ದರೋ, ಬಹುಶಃ ಅದೇ ನೀತಿಯನ್ನು ಅನುಸರಿಸತಕ್ಕ ವ್ಯಕ್ತಿಗಳು ಈ ಗ್ರಾಮ ನೌಕರರು ಎಂದರೆ, ಪಟೇಲ್ ಶ್ಯಾನುಭೋಗರು ಎಂಬ ಒಂದು ಭಾವನೆ ಅನೇಕ ಸಂದರ್ಭಗಳಲ್ಲಿ ಹಳ್ಳಿಗಳಲ್ಲಿರತಕ್ಕ ಮನುಷ್ಯರಿಗೆ ಬರುತ್ತದೆ. ಇಂಥಾ ಒಂದು ಪದ್ಧತಿಗೆ ಬದಲಾವಣೆ ತರಬೇಕಾದುದು ಅತ್ಯಾವಶ್ಯಕ. ಇದಕ್ಕಾಗಿ ಈ ತಿದ್ದುಪಡಿ ಮಸೂದೆಯನ್ನು ತಂದಿರತಕ್ಕದ್ದು ಬಹಳ ಸೂಕ್ತವಾಗಿದೆ. ಇದರಲ್ಲಿ ಮುಖ್ಯವಾಗಿ, ಶ್ಯಾನುಭೋಗರೂ ಪಟೇಲರೂ ಸೆಕ್ಯೂರಿಟಿ ಕೊಡಬೇಕು, ಈ ರೀತಿ ಕೊಡದೇಹೋದ ಪಕ್ಷದಲ್ಲಿ ಜಿಲ್ಲಾಧಿಕಾರಿಗಳು ಅವರ ತೀರ್ಪನ್ನು ಕೊಡಲು ಅವಕಾಶವನ್ನು ಮಾಡಿ ನಮೂದು ಮಾಡಿದೆ. ಈ ರೀತಿ ಒಂದು ಷರತ್ತನ್ನು ಅವರ ಮೇರೆ ಹೊರಿಸುವುದರಿಂದ ಅವರು ಮಾಡತಕ್ಕ ಕೆಲಸದಲ್ಲಿ ಹೆಚ್ಚಿನ ಆಸಕ್ತಿ ಮತ್ತು ಕಾರ್ಯತತ್ಪರತೆ ಇರುತ್ತದೆ. ಇಲ್ಲದಿದ್ದರೆ ಈ ಮನೋಭಾವ ಅವರಲ್ಲಿರುವುದಿಲ್ಲ. ಜವಾಬ್ದಿ ಸಮಯದಲ್ಲಿ ಎಷ್ಟೋ ಜಾಕಿ ನಿಂತರೂ ಪಟೇಲರು ಕೆಲವು ಸಂದರ್ಭಗಳಲ್ಲಿ, ನಾವು ಪಟೇಲರು ಬಾಕಿ ನಿಂತರೂ ಚಿಂತೆಯಿಲ್ಲ ಎಂಬ ಮನೋಭಾವವನ್ನು ಹೊಂದಿರುತ್ತಾರೆ. ಇಂಥ ಉದಾಸೀನ ಮನೋಭಾವವನ್ನು ತಡೆಗಟ್ಟುವುದಕ್ಕೆ ಇದೊಂದು ಸಾಧನವಾಗಿದೆ. ಆದುದರಿಂದ ಈಗ ತಂದಿರತಕ್ಕ ತಿದ್ದುಪಡಿಯನ್ನು ನಾನು ಮನಃಪೂರ್ವಕವಾಗಿ ಸಮರ್ಥಿಸುತ್ತೇನೆ.

*ಶ್ರೀ ಎಸ್. ಸಿದ್ದಪ್ಪ (ಮ್ಯಾಗಡಿ).—ಅಧ್ಯಕ್ಷರೇ, ಈ ದಿವಸ ನಮ್ಮ ಮುಂದಿರತಕ್ಕ ಗ್ರಾಮನೌಕರರ ಮಸೂದೆಯ ವಿಷಯದಲ್ಲಿ ಈಗಾಗಲೇ ನಮ್ಮ ಮಾನ್ಯ ಸ್ನೇಹಿತರು ಅವರವರಿಗೆ ತೋರಿದಂತೆ ಅನೇಕ ರೀತಿಯಲ್ಲಿ ಅಪ್ಪಣೆ ಕೊಡಿಸಿದ್ದಾರೆ. ನಾನಾದರೂ ಸಭೆಯ ಮುಂದೆ ತಿಳಿಸುವುದೇನೆಂದರೆ, ಗ್ರಾಮ ನೌಕರ ವಿಷಯದಲ್ಲಿ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂಬ ಸಂಕಲ್ಪ ಬಹು ಕಾಲದಿಂದಲೂ ಇದ್ದೇ ಇದೆ. ಈಗ ಎಲ್ಲವನ್ನೂ ಆಲೋಚನೆ ಮಾಡಿ ಸರ್ಕಾರದವರು ಸೂಕ್ತ ರೀತಿಯಲ್ಲಿ ಈ ಬಿಲ್ಲನ್ನು ತಯಾರಿಸಿ ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿರುವ ಅಂಶಗಳನ್ನು ನಾವು ಓದಿ ನೋಡಿದಲ್ಲಿ ಇದರಲ್ಲಿ ತಪ್ಪೇನೂ ಕಾಣುವುದಿಲ್ಲ. ಇದು ಗ್ರಾಮ ನೌಕರರಿಗೇ ಅನುಕೂಲವಾಗುವ ವ್ಯವಸ್ಥೆ. ಅನೇಕರು ಪಟೇಲರಿಗೇ ಹಣ ಕೊಡದಿರುವ ಸಂದರ್ಭಗಳಿವೆ. ಆದುದರಿಂದ ದಯವಾಡಿ ಈಗಿರತಕ್ಕ ಬಿಲ್ಲನ್ನು ತಿದ್ದುಪಡಿಯ ಸಹಿತ ಸಭೆ ತೀರ್ಮಾನ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಮಾನ್ಯ ಸ್ನೇಹಿತರಾದ ಶ್ರೀ ಪುಟ್ಟಸ್ವಾಮಿಯವರು ಸರ್ಕಾರಿ ಅಧಿಕಾರಿಗಳು ಕ್ಯಾಂಪ್ ಮಾಡಿದರೆ, ಪಟೇರ್ ಶ್ಯಾನುಭೋಗರು ಅವರ ಖರ್ಚನ್ನು ವಹಿಸಬೇಕು, ಇದರಿಂದ ಅವರು ತಪ್ಪುದಾರಿ ಹಿಡಿಯುತ್ತಾರೆಂದು ಅಪ್ಪಣೆ ಕೊಡಿಸಿದರು. ಇದು ಖಂಡಿತವಾಗಿಯೂ ಸರಿಯಲ್ಲ. ಅವರಿಗೆ ಬರುವ ಕಡಮೆ ಪೋಟಿಗೆಯಲ್ಲಿ ಪಟೇರ್ ಶ್ಯಾನುಭೋಗರು ಈ ಖರ್ಚನ್ನೆಲ್ಲಾ ಕೊಡಲು ಸಾಧ್ಯವೇ ಇಲ್ಲ. ಆ ಖರ್ಚನ್ನು ಪ್ರಜೆಗಳೇ ಕೊಡುತ್ತಾರೆ ಅಥವಾ ಅಧಿಕಾರಿಗಳೇ ಕೊಡುತ್ತಾರೆ. ಶ್ರೀ ಪುಟ್ಟಸ್ವಾಮಿಯವರು ಏಕೆ ಈ ರೀತಿ ಅಪ್ಪಣೆ ಕೊಡಿಸಿದರೋ ನನಗಂತೂ ಅರ್ಥವಾಗುವುದಿಲ್ಲ. ಶೇಕಡ 99 ಭಾಗ ದೇಶದಲ್ಲಿ ಜವಾಬ್ದಿನಲ್ಲಿರುವ ಪಟೇರ್ ಶ್ಯಾನುಭೋಗರಿಲ್ಲ. ಆದುದರಿಂದ ಇವರಿಗೆ ಈ ಶಾಸನದಿಂದ ಅನಾನುಕೂಲವಾಗುವುದಿಲ್ಲ. ಇಂಥ ಸುವ್ಯವಸ್ಥಿತವಾದ ಬಿಲ್ಲನ್ನು ಪ್ರಜಾನಕರ್ಕಾರ ತಂದಿರತಕ್ಕದ್ದು ಸಂತೋಷದಾಯಕವಾದ ವಿಚಾರ. ಈ ಬಿಲ್ಲನ ವಿಚಾರದಲ್ಲಿ ಕೆಲವು ಮಾತುಗಳನ್ನಾಡಿದ್ದೇನೆ. ಇದನ್ನು ಗಮನದಲ್ಲಿಟ್ಟುಕೊಂಡು ಇದನ್ನು ಸರ್ವರೂ ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Sri KADIDAL MANJAPPA (Minister for Revenue).—Some Hon'ble Members spoke yesterday as though the whole scheme of the Bill originated in my brain. On a previous occasion, I was submitting that the Government Order was passed about seven years ago when the Congress was not in power. The order was to the effect that the Village Offices Act should be amended on more or less the same lines on which the present Bill is drafted. Subsequently, in the year 1951, the then Revenue Commissioner sent the draft Bill and afterwards the Bill as sent by the Revenue Commissioner was introduced in this House. Twice, I consulted the Deputy Commissioners and the Revenue Commissioner. On both the occasions, they were of the view that this Bill was necessary in the interests of administration and in the interests of Government moneys. So it is not my scheme. The Select Committee has proposed certain amendments. Personally speaking I am of the view that the clauses of the Bill are diluted and they are very harmless.

4 P.M.

One or two Hon'ble Members were of the view that there is no need to amend Section 7 as proposed now in view of the fact that similar provision empowering officers to suspend is contained in Section 7. I only ask them to read Section 7 very carefully and mark the words appearing in that

(SRI KADIDAL MANJAPPA.)

Section, namely, "after enquiry". No doubt it has come to my notice on two or three occasions that the Deputy Commissioners had suspended village officers without proper enquiry. In one or two cases, I had to revise the order. The practice is one thing. But the practice does not become law. Illegal orders cannot be taken as precedents. Therefore Section 7 has to be amended and the amendment now proposed by the Select Committee is wholesome, because only the Deputy Commissioner and Assistant Commissioner are empowered to suspend a village officer only under limited circumstances. That is, if they are satisfied that there is a *prima facie* case of misappropriation or other misconduct of a grave nature, they can place the village officer under suspension. Therefore, they cannot resort to this provision always. Only in case of a *prima facie* proof of misappropriation or grave misconduct, they can apply the provisions of this Section. Regarding the next clause, namely Section 3, many Hon'ble Members expressed the view that this may work as a geat hardship. Some Members have expressed the view that this provision does not serve any purpose because it does not touch all those persons who are having some immovable property. Sri Bheemappa Naik rightly pointed out that if he owns even a shed, it can be construed as immovable property and no action can be taken against him in accordance with the provisions now proposed. The majority of village officers are owning some kind or other of immovable property. So, this provision touches only one or two per cent of village officers, and so, it has been argued that it does not fulfil the purpose. I have no objection if the House is of the view that this clause may be deleted.

Mr. SPEAKER.—There is no amendment moved to that effect.

Sri KADIDAL MANJAPPA.—My friend Sri Mohamed Imam asked me whether I am in a position to point out cases of misappropriation on the part of village officers. I can give him hundreds of instances where the village officers have misappropriated.

Sri J. MOHAMED IMAM.—There may be one or two instances here and there.

Sri KADIDAL MANJAPPA.—My friend Sri Puttaswamy said that there is no need to make sweeping remarks against village officers. I do agree with him that there are good officers as well as bad officers. I do agree with him when he says that majority of them are good but the law is made only against persons who resort to crimes and offences, though such persons may not be more than even 3 per cent, whether it is under Village Officers Act, or Indian Penal Code or any other Act. Sri Puttaswamy further said that the village officers are made to bear the camp expenses of officers from the Revenue Commissioner down to the Revenue Inspector. I certainly do not agree with him. If at all, I have heard years ago that lower officers in some cases are made to bear camp expenses. I have not heard recently of a similar case where village officers are made to bear camp expenses of revenue officers or other officers. I do not think our officers are mean enough to ask the village officers to bear these expenses. I may assure Sri Puttaswamy that I am prepared to take drastic actions against officers who resort to these methods. Sir, under these circumstances, with the modification I have suggested, the Bill may be accepted by the House.

Mr. SPEAKER.—The question is:

"That the Mysore Village Offices (Amendment) Bill, 1953, as reported by the Select Committee, be taken into consideration."

The motion was adopted.

Mr. SPEAKER.—Clauses. The question is:

"That clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 3.

Sri T. N. MUDLAGIRI GOWDA.—I have sent an amendment which is as follows :—

"That clause 3 be deleted."

Mr. SPEAKER.—This amendment cannot be entertained because under Rule 143 (2) an amendment shall not be moved which has merely the effect of a negative vote. The only thing the House can do is, if it so desires, the clause can be voted down, but it cannot be deleted.

The question is :

"That clause 3 stand part of the Bill."

The motion was negatived.

Mr. SPEAKER.—Clause 1. The question is :

"That clause 1 stand part of the Bill."

The motion was adopted.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri KADIDAL MANJAPPA.—Sir, I move :

"That the Mysore Village Offices (Amendment) Bill, 1953, as amended, be passed."

Mr. SPEAKER.—The question is :

"That the Mysore Village Offices (Amendment) Bill, 1953, as amended, be passed."

The motion was adopted.

DISCUSSION ON EDUCATIONAL REFORMS.

Sri K. HANUMANTHAIYA.—(Chief Minister).—Regarding the discussion on the Educational Reforms Committee Report, I was the Chairman and so I will be here. The Education Minister is engaged in the other House because he has to move Supplementary Demands. He will be coming here as soon as that work is finished there.

Mr. SPEAKER.—That may be done.

Sri J. MOHAMED IMAM.—Since the Leader of the House is here, I may point out to him the inconvenience caused to the Members of both the Houses and to the Ministers and the Speaker on account of having concurrent sessions of both the Assembly and the Council on the same day. We must come to some understanding and make some other arrangements to see that the work of these two Houses do not clash. They must either allow separate days for the Council or adjust the business in such a way that the Ministers should be here and the time of the House should not be wasted.

Mr. SPEAKER.—The suggestion may be considered by the Government.

ಶ್ರೀ ಎ. ಭೀಮಪ್ಪನಾಯಕ್.—ಸ್ವಾಮಿ, ಇದುವರೆಗೂ ನಾನು ನರ್ಸರಿ ಸ್ಕೂಲಿನ ಸ್ಟೇಜಿನಿಂದ ಹಿಡಿದು ಯೂನಿವರ್ಸಿಟಿವರೆಗೂ ಅಂದರೆ ಇದನ್ನೇ ಇಂಗ್ಲೀಷಿನಲ್ಲಿ ಹೇಳುವುದಾದರೆ 'from cradle to grave' ಅನ್ನುವ ಹಾಗೆ, ಮೊದಲನಿಂದ ಕೊನೆಯವರೆಗೂ ಈ ಬದಲಾವಣೆ ಹೊಂದುವುದಾಗಿರುವ ಶಿಕ್ಷಣ ಪದ್ಧತಿಯನ್ನು ಒಂದು ವಿಹಂಗಮ ದೃಷ್ಟಿಯಿಂದ ನೋಡಿ ನನ್ನ ಅಭಿಪ್ರಾಯಗಳನ್ನು ಸೂಚಿಸಿದ್ದೇನೆ. ಪ್ರೈಮರಿ ಸ್ಕೂಲುಗಳ ವಿಚಾರವಾಗಿ ಕೆಲವು ಅಭಿಪ್ರಾಯಗಳನ್ನಿಟ್ಟಿದ್ದೇನೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಪ್ರೈಮರಿ ಸ್ಟೇಜಿನಲ್ಲಿ ಹೇಳಿರತಕ್ಕ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ. ಕೊನೆಯ ಪಕ್ಷ ಇನ್ನು 5 ವರ್ಷಗಳವರೆಗೂ ಇದು ಸಾಧ್ಯವೇ ಇಲ್ಲ ಅನ್ನುವುದನ್ನು ತೋರಿಸುವುದಕ್ಕಾಗಿ ನಾನೀಗ ಕೆಲವು ವಿವರಗಳನ್ನು ತಿಳಿಸಬೇಕಾಗಿದೆ.

ನಮ್ಮಲ್ಲಿರತಕ್ಕ ಒಟ್ಟು ಪ್ರೈಮರಿ ಸ್ಕೂಲುಗಳು ಮತ್ತು N. T. M. ಸ್ಕೂಲುಗಳೂ ಸೇರಿ 10,475 ಇರುತ್ತವೆ. ಇದರಲ್ಲಿ Single-teacher school ಗಳು 5ಸಾವಿರ ಇವೆ. ಈಗ ಒಬ್ಬೊಬ್ಬ ಉಪಾಧ್ಯಾಯರೇ ಇಪ್ಪೊಂದು ಸ್ಕೂಲುಗಳಿಲ್ಲದ್ದುಕೊಂಡು 4 ತರಗತಿಗಳ ಪಾಠವನ್ನೂ ನಡೆಸಿಕೊಂಡು ಬರುತ್ತಿದ್ದಾರೆ.

ಒಬ್ಬರಿಗೆ ಪಾಠ ಹೇಳುವುದು, ಇನ್ನೊಬ್ಬನಿಗೆ ಮಾನಿಟರಿಂದ ದಿಕ್ಕೇಷ್ಟು ಹೇಳಿಸುವುದು, ಮತ್ತೊಬ್ಬನಿಗೆ ಲೆಕ್ಕ ಹಾಕಿಸಿ ಒಂದು ಮೂಲೆಯಲ್ಲಿ ಕೂಡಿಸುವುದ , ಅಂತೂ

(ಶ್ರೀ ಎ. ಭೀಮಪ್ಪನಾಯಕ್.)

ಈ ರೀತಿಯಾಗಿ 5×4—20 ಪೀರಿಯಡ್‌ಗಳ ಪಾಠವನ್ನೂ ಒಬ್ಬ ಉಪಾಧ್ಯಾಯರೇ ನಡೆಸಿಕೊಂಡು ಹೋಗುತ್ತಿದ್ದಾರೆ. ಅಂದ ಮೇಲೆ ಅವರು ಹುಡುಗರಿಗೆ ಎಷ್ಟರಮಟ್ಟಿಗೆ ಪಾಠಹೇಳಿಕೊಡುತ್ತಿರಬಹುದೆಂಬುದನ್ನು ತಾವೇ ಸ್ವತಃ ಆಲೋಚನೆಮಾಡಿ. ಈಗ ನಾಲ್ಕು ವರ್ಷಗಳ ಅವಧಿಯುರತಕ್ಕ ಈ ಪ್ರೈಮರಿ ಸ್ಕೂಲುಗಳನ್ನು 6 ವರ್ಷಗಳ ಅವಧಿಗೆ ಹೆಚ್ಚಿಸಿದರೆ ಇದುಸಾಧ್ಯವೆ ಅಥವಾ ಇದು ಪ್ರಾಕ್ಟಿಕರ್ ಆಗಿ ಆಗಿರುತ್ತದೆಯೇ ಎಂಬುದನ್ನು ವಿವೇಚನೆಯಿಟ್ಟು ನೋಡಿದಲ್ಲಿ ಇದು ಖಂಡಿತ ಸಾಧ್ಯವಿಲ್ಲ. ಇದೇ ಪ್ರೈಮರಿ ವಿದ್ಯಾಭ್ಯಾಸವನ್ನು ಬೇರೆ ಕಡೆಗಳಲ್ಲಿ ಈಗಲೂ 4 ವರ್ಷಗಳಂತೆಯೇ ನಡೆಯಿಸಿಕೊಂಡು ಬರುತ್ತಿದ್ದಾರೆ. ಇಂಥ ಸ್ಕೂಲುಗಳಲ್ಲಿ ಪಾಠಹೇಳಿಕೊಡಬೇಕಾದ ಉಪಾಧ್ಯಾಯರು ಟೆಕ್ನಿಕಲ್ ಟ್ರೈನ್ಡ್ ಟೀಚರ್ಸ್‌ಗಳಾಗಿರಬೇಕು. ಇಂಗ್ಲೀಷಿನಲ್ಲಾ ಮತ್ತು ವ್ಯವಸಾಯದಲ್ಲಿ ಒಬ್ಬ ಉಪಾಧ್ಯಾಯರು ಟ್ರೈನಿಂಗ್ ಆಗಿರಬೇಕಾದರೆ ಆತನಲ್ಲಿ ಎಂಥ ಶಕ್ತಿಯಿರಬೇಕು, ಎಷ್ಟು ದಕ್ಷತೆಯಿರಬೇಕು—ಎಂಬೀ ವಿಚಾರಗಳೂ ಕೂಡ ಬಹಳ ಯೋಚನಾರ್ಹವಾದವುಗಳಾಗಿವೆ. ಇಷ್ಟೇ ಅಲ್ಲದೆ, ಹೊರಗಡೆ ಹಳ್ಳಿಗಳಲ್ಲಿ ಹುಡುಗರಿಗೆ ತೋರಿಸಿ ಅಭ್ಯಾಸ ನಡೆಸತಕ್ಕ ಬಗ್ಗೆ ಹೊಲಗದ್ದೆಗಳು ಮತ್ತು ಬೆಳೆಗಳು ಇರುವಂಥ ಅವಕಾಶಗಳು ಕೆಲವು ಇವೆ. ಅದೇ ರೀತಿ ಪಟ್ಟಣದಲ್ಲಿರುವ ಹುಡುಗರಿಗೂ ಕೆಲವು ಬೇರೆ ಅವಕಾಶಗಳಿರುತ್ತವೆ. ಹೀಗಿರುವಾಗ ತಾವೀಗ ಯಾವ ಯಾವ ಕ್ಲಾಸುಗಳನ್ನು ಎಲ್ಲೆಲ್ಲಿ ಡಬೇಕೆಂಬ ಬಗ್ಗೆ ಏನು ಹೇಳಿರುತ್ತೀರಿ ? ಒಂದನೆಯ ತರಗತಿಯಿಂದ ಹಿಡಿದು ನಾಲ್ಕನೆಯ ತರಗತಿಯವರೆಗೂ ಎಲ್ಲಾ ಹುಡುಗರುಗಳಿಗೂ ಪ್ಯೆರನ್ನೂ ತೋರಿಸಲು ಎಲ್ಲಿಗೆ ಕರೆದುಕೊಂಡು ಹೋಗುತ್ತೀರಿ ? ಅಥವಾ ಕೆಲವು ಹುಡುಗರನ್ನು ಬಿಟ್ಟು ಕೆಲವರನ್ನು ಮಾತ್ರ ಕರೆದುಕೊಂಡು ಹೋಗುತ್ತೀರಾ ? ಅಥವಾ ಬೇರೆ ಬೇರೆ ಹುಡುಗರಿಗೆ ಬೇರೆ ಬೇರೆ ಟ್ರೈನಿಂಗ್ ಕ್ಲಾಸನ್ನು ಇಟ್ಟು ಅವರನ್ನು ಬೇರೆ ಬೇರೆ ಸ್ಥಳಗಳಿಗೆ ಕರೆದುಕೊಂಡು ಹೋಗುತ್ತೀರಾ ? ಈ ವಿಚಾರಗಳು ಒಂದೂ ಗೊತ್ತಾಗುವುದಿಲ್ಲ. ಒಂದನೆಯ ಕ್ಲಾಸಿನಿಂದ ಹಿಡಿದು 4ನೆಯ ಕ್ಲಾಸಿನವರೆಗೂ ಒಂದೇ ವಿಧವಾದ ಟ್ರೈನಿಂಗ್, ಒಬ್ಬರೇ ಟೀಚರ್, ಒಂದೇ ವಿಧವಾದ ಟ್ರೈನಿಂಗ್ ಕೋರ್ಸು ಇರುವುದಕ್ಕೆ ಸಾಧ್ಯವಾಗುತ್ತದೆಯೇ ! ಈ ಅಂಶಗಳೆಲ್ಲಾ ಮುಖ್ಯವಾಗಿ ಆಲೋಚನೆ ಮಾಡಬೇಕಾದ ವಿಷಯಗಳು. ಒಂದು ಹೋಬಳಿಗೆ ಒಂದೆರಡು ಮಿಡಲ್ ಸ್ಕೂಲುಗಳಿರಬಹುದು. ಆದರೆ ಸಿಂಗಲ್ ಟೀಚರ್ ಇರತಕ್ಕಂಥ ಶಾಲೆಗಳು 5—6 ಸಾವಿರಕ್ಕೆ ಕಮ್ಮಿ ಇರುವುದಿಲ್ಲ, ಈ ಪಾಠಶಾಲೆಗಳನ್ನೆಲ್ಲಾ ಡಬ್ಬರ್ ಟೀಚರ್ ಶಾಲೆಗಳನ್ನಾಗಿ ಪರಿವರ್ತಿಸಬೇಕಾಗಿದ್ದರೆ, ವೃತ್ತಿ ಶಿಕ್ಷಣಕ್ಕೆ ಒಬ್ಬ ಉಪಾಧ್ಯಾಯ ಮತ್ತು ಸಾಮಾನ್ಯ ವಿದ್ಯಾಭ್ಯಾಸಕ್ಕೆ ಒಬ್ಬ ಉಪಾಧ್ಯಾಯ ಹೀಗೆ ಮಾಡಬೇಕಾಗಿದ್ದರೆ, ಆಗ ದುಡ್ಡಿನ ಖರ್ಚೆಷ್ಟು ಮತ್ತು ಇತರ ತೊಂದರೆಗಳೆಷ್ಟು ಎಂಬುದನ್ನು ತಾವು ಆಲೋಚನೆ ಮಾಡಿ.

ಆಮೇಲೆ ಐದು—ಆರನೆಯ ವರ್ಷದ ತರಗತಿಗಳಿಗೆ ಬೇರೆ ಒಬ್ಬ ಉಪಾಧ್ಯಾಯರು ಬೇಕು. ಇದು ಎರಡು ವರ್ಷದ ಕೋರ್ಸು. ಈಗ ಸಾಮಾನ್ಯವಾಗಿ ಒಂದು ಹೋಬಳಿಗೆ ಒಂದು ಮಿಡ್ಲ್ ಸ್ಕೂಲು ಇದೆಯೆಂದು ಹೇಳಬಹುದು. ಎಷ್ಟೋ ಕಡೆ ಒಂದ ಮಿಡ್ಲ್ ಸ್ಕೂಲು ಸಹ ಇರುವುದಿಲ್ಲ. ಹೀಗಿರುವಾಗ ಈ ಸ್ಕೀಮಿನ ಪ್ರಕಾರ ಕೊನೆಯ ಪಕ್ಷ ಪ್ರತಿ ಐದು—ಆರು ಗ್ರಾಮಗಳಿಗಾದರೂ ಒಂದರಂತೆ 5—6ನೇ ವರ್ಷದ ತರಗತಿಗಳು ಬೇಕಾಗಿರುತ್ತವೆ. ಆ ಪ್ರಕಾರ 5—6 ಸ್ಕೂಲಿಗೊಂದರಂತೆ ಲೆಕ್ಕಹಾಕಿದರೂ ಕೊನೆಯಪಕ್ಷ 5—6 ಸಾವಿರ ಸ್ಕೂಲುಗಳು ಏರ್ಪಡಬೇಕಾಗುತ್ತವೆ. ಆಗ್ಗೆ ಅವುಗಳನ್ನು ಎಲ್ಲಿ ಏರ್ಪಡಿಸಬೇಕೆಂಬ ಪ್ರಶ್ನೆ ಬೇರೆ. ಅಥವಾ ತಾಲ್ಲೂಕಿನಲ್ಲಿ ಈಗಿರತಕ್ಕ ಮಿಡ್ಲ್ ಸ್ಕೂಲುಗಳಿಗೇ ಈ ಹುಡುಗರನ್ನು ಕಳುಹಿಸಿ ಎಂದರೆ ಇನ್ನೊಂದು ರೀತಿಯಲ್ಲಿ ತೊಂದರೆ ಬರುತ್ತದೆ. ಅಲ್ಲದೆ ಪಟ್ಟಣದ ಹುಡುಗರಿಗೆ manual labourನಲ್ಲಿ ಆಕರ್ಷಣೆ ಹುಟ್ಟುವಂತೆ ಮಾಡಬೇಕಾದರೆ ಅವನ್ನು ಹಳ್ಳಿಯ ಸ್ಕೂಲಿಗೆ ಹಾಕಬೇಕೇ, ಹಾಗೆಯೇ ಹಳ್ಳಿಯ ಹುಡುಗರಿಗೆ ಪಟ್ಟಣದಲ್ಲಿರುವ ಕೈಗಾರಿಕೆಗಳ ವಿಷಯದಲ್ಲಿ ಅನುಭವ ಪಡೆಯಲಿಕ್ಕೆಂದು ಪಟ್ಟಣದ ಸ್ಕೂಲಿಗೆ ಸೇರಿಸಬೇಕೇ ಎಂಬುದನ್ನೆಲ್ಲಾ ಯೋಚನೆ ಮಾಡಬೇಕಾಗಿ ಬರುತ್ತದೆ.

ಹೀಗೆ ಪ್ರೈಮರಿ ಸ್ಕೂಲಿನಲ್ಲಿ ಈಗಿರುವ ಪದ್ಧತಿಯನ್ನು ಬದಲಾಯಿಸಿದರೆ ಹೊಸದಾಗಿ ಸ್ಕೂಲು ಕಟ್ಟಡಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಈಗ ಸ್ವಲ್ಪ ಹೆಚ್ಚು ಕಡಮೆ 6 ಲಕ್ಷ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವುದಕ್ಕೆ ನೀವು ಅವಕಾಶ ಮಾಡಿದ್ದೀರಿ. ನಮ್ಮ ಜನ ಸಂಖ್ಯೆಯಲ್ಲಿ 15% ರಷ್ಟು ಬಾಲಕರಿದ್ದಾರೆಂದರೆ ಕೊನೆಯ ಪಕ್ಷ 15 ಲಕ್ಷ ವಿದ್ಯಾರ್ಥಿಗಳಿಗೆ ನಾವು ಬಲಾತ್ಕಾರ ವಿದ್ಯಾಭ್ಯಾಸವನ್ನು ಕೊಡಬೇಕಾಗುತ್ತದೆ. 6 ಲಕ್ಷ ಹುಡುಗರಿಗೆ ಮಾಡಿರುವ ಏರ್ಪಾಡನ್ನೇ 15 ಲಕ್ಷ ಹುಡುಗರಿಗೆ ಮಾಡಬೇಕೆಂದರೂ ಈಗಿರುವುದಕ್ಕೆ ಇನ್ನೂ 2½ಯಷ್ಟು ಖರ್ಚನ್ನು ಜಾಸ್ತಿಮಾಡಬೇಕು. ಕೆಲವು ಕಡೆ optional ಇನ್ನು ಕೆಲವು ಕಡೆ compulsory ಎಂದು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಈ ಸಮಿತಿಯ ನಲಹೆಯಂತೆ ಮಾಡಬೇಕಾದರೆ ಎನೇನು ಖರ್ಚುಮಾಡಬೇಕೆಂಬುದನ್ನು ನಾವು ಮೊದಲೇ ಯೋಚನೆಮಾಡಬೇಕು. ಯಾವ ಯೋಜನೆ ಮಾಡಬೇಕಾದರೂ ಅದನ್ನೊಂದು National system of education ಎಂದು ಹೇಳಿ ಮಾಡಬೇಕಾದರೆ ಅದರ ಬಗ್ಗೆ ಎಷ್ಟು ಶ್ರದ್ಧೆ, ಶ್ರಮ ವಹಿಸಬೇಕಾಗುತ್ತದೆ ಎಂಬುದನ್ನು ಮೊದಲೇ ಯೋಚನೆಮಾಡಬೇಕಾಗುತ್ತದೆ. ಅದೂ ಅಲ್ಲದೆ, ಮುಖ್ಯ ಮಂತ್ರಿಗಳು ಮೊನ್ನೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಒಂದು ಭಾಷಣ ಮಾಡುತ್ತಾ ಈ ಹೊಸ ವಿದ್ಯಾಭ್ಯಾಸವನ್ನು ಜಾರಿಗೆ ತರುವುದರಲ್ಲಿ ಯಾವ ಹೊಸ ಕಂದಾಯವನ್ನೂ ಹಾಕುವುದಿಲ್ಲ ಎಂದು ಆಗಲೇ ಹೇಳಿಬಿಟ್ಟಿದ್ದಾರೆ. ಕಂದಾಯ ಹಾಕದೆ, ಈಗಿರತಕ್ಕ ಬಡ್ಜೆಟ್ಟಿನ ಸ್ಥಿತಿಯಲ್ಲಿ ಈ ಸುಧಾರಣೆಗಳನ್ನು ತರುವುದಕ್ಕೆ ಅನುಗುಣವಾಗಿ ಕಟ್ಟಡ ನಲಕರಣೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅಷ್ಟೊಂದು ಉಪಾಧ್ಯಾಯರುಗಳನ್ನು ಹೊಂದಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದರಲ್ಲೂ ತರಬೇತಾದ ಉಪಾಧ್ಯಾಯರುಗಳು ಬೇಕು. ಆಸಕ್ತಿಯಿಂದ ಡಿಸ್ಟ್ರಿಕ್ಟ್ ಡಿಸ್ಟ್ರಿಕ್ಟ್‌ಗೂ ಒಂದರಂತೆ ಇಂಥ ಉಪಾಧ್ಯಾಯರ ಶಿಕ್ಷಣ ಶಾಲೆಗಳನ್ನು ಏರ್ಪಡಿಸಿ, ಅಲ್ಲಿ ಪ್ರತಿಯೊಂದು ಶಾಲೆಯಲ್ಲೂ ವರ್ಷಕ್ಕೆ 100 ಜನರನ್ನು ತರಬೇತು ಮಾಡಿದರೂ ನಮಗೆ ಬೇಕಾದಷ್ಟು ಉಪಾಧ್ಯಾಯರುಗಳು ಬೇಕಾದರೆ ಕೊನೆಯ ಪಕ್ಷ 10 ವರ್ಷಗಳಾದರೂ ಬೇಕೆಂದು ಹೇಳಬಹುದು. 'ರಷ್ಯಾ ಇದನ್ನು ಮಾಡಲಿಲ್ಲವೇ, ಇವೊತ್ತು ಷರಾ ಮಾಡಿ all-out efforts ಮಾಡಿದರೆ ಇನ್ನಾರು ತಿಂಗಳಲ್ಲಿ ಮಾಡ್ತೀವುದಕ್ಕೆ ಸಾಧ್ಯವಿಲ್ಲವೇ' ಎಂದು ಹೇಳಬಹುದು. ಆದೀತು ! ಆದರೆ ಆ ಶಕ್ತಿ, ಆ ದಕ್ಷತೆ, ಆ ಸಾಮರ್ಥ್ಯ ಮೈಸೂರು ಸರ್ಕಾರದವರಿಗೆ ಬರಬೇಕಾದರೆ ಇಲ್ಲಿನ ಜನಗಳೂ ಮಿಕ್ಕೆಲ್ಲ ವಿಷಯಗಳನ್ನು ಬಿಟ್ಟು ಇದೊಂದನ್ನೇ ಇಟ್ಟು

ಕೊಂಡರೆ ಸಾಧ್ಯವಾಗುತ್ತದೋ ಏನೋ, ಅಷ್ಟೆ ಈ ರೀತಿಯಾಗಿ ಇದರಲ್ಲಿ ಕಷ್ಟವಿದೆ.

ಆ ಮೇಲೆ ಸೆಕೆಂಡರಿ ಎಜುಕೇಷನ್ ಸ್ಕೀಮು. ಇದೂ ಕಷ್ಟವೇ. ಇಲ್ಲ ವೃತ್ತಿಶಿಕ್ಷಣ ಇರುತ್ತದೆಂದು ವಿದ್ಯಾಮಂತ್ರಿಗಳು ಹೇಳಿದ್ದಾರೆ. ಇಲ್ಲಿಯೂ ಕೂಡ ವೃತ್ತಿಶಿಕ್ಷಣದ ಟ್ರೈನಿಂಗ್ ಎಂದು ಹೇಳಿದರೆ, ವೃತ್ತಿಶಿಕ್ಷಣದ ಟ್ರೈನಿಂಗ್ ಕೊಡುವಾಗ ಪಟ್ಟಣಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಸಿಕ್ಕಿರತಕ್ಕ ವಿದ್ಯಾಭ್ಯಾಸ ಕ್ರಮವೇ ಬೇರೆ, ಹಳ್ಳಿಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಸಿಕ್ಕಿರತಕ್ಕ ವಿದ್ಯಾಭ್ಯಾಸ ಕ್ರಮವೇ ಬೇರೆ. ಏಕೆಂದರೆ, ಹಳ್ಳಿಯ ಹುಡುಗ ಹಳ್ಳಿಯ ವೃತ್ತಿ, ಅಲ್ಲಿನ ಅನುಕೂಲತೆ, ಪದ್ಧತಿಗಳಿಗನುಗುಣವಾಗಿ ಟ್ರೈನಿಂಗ್ ಪಡೆದಿರುತ್ತಾನೆ. ಪಟ್ಟಣದಲ್ಲಿರುವವರ ವೃತ್ತಿಯೇ ಬೇರೆ. ಹೀಗಾಗಿ ಹಳ್ಳಿಯ ವಿದ್ಯಾರ್ಥಿಯ ಕೋರ್ಸಿಗೂ ಪಟ್ಟಣದ ವಿದ್ಯಾರ್ಥಿಯ ಕೋರ್ಸಿಗೂ ಒಂದೇ ವಿಧವಾದ ಟ್ರೈನಿಂಗ್ ಆದರೂ ವ್ಯತ್ಯಾಸವಾಗುತ್ತದೆ. ಏಕೆಂದರೆ ಹಳ್ಳಿಯ ಉಪಾಧ್ಯಾಯರು ಅಲ್ಲಿನ ಸುತ್ತಮುತ್ತ ವಿನಿದೆಯೋ ಅಲ್ಲಿನ ಉತ್ಪತ್ತಿ ವಿನಿದೆಯೋ ಅವುಗಳನ್ನುನೋಡಿಕೊಂಡು ಟ್ರೈನಿಂಗ್ ಕೊಡುತ್ತಾರೆ. ಹೀಗಾಗಿ ಹಳ್ಳಿಯ ಹುಡುಗನು ಪಟ್ಟಣದ ಸ್ಕೂಲಿಗೆ ಬಂದರೆ ಅವನಿಗೆ ನೀವು Handicap ಕೊಟ್ಟಹಾಗಾಗುತ್ತದೆ. ಈಗಲೂ ಕೂಡ ಹಳ್ಳಿಯಲ್ಲಿರತಕ್ಕ ವಿದ್ಯಾರ್ಥಿಗೂ ಪಟ್ಟಣದಲ್ಲಿರತಕ್ಕ ವಿದ್ಯಾರ್ಥಿಗೂ ಎಷ್ಟೋ ವ್ಯತ್ಯಾಸವಿರುತ್ತದೆ. ಬೆಂಗಳೂರಿನಲ್ಲಿರುವ ಸ್ಕೂಲು ಕಾಲೇಜುಗಳಲ್ಲಿ ನೋಡುವುದಾದರೆ ಇಲ್ಲಿ ಲ್ಯಾಬೊರೇಟರಿ, ಉಪಕರಣಗಳು, ಇಲ್ಲಿನ staff ಬೇರೆ ಊರುಗಳಲ್ಲಿರುವ ಕಾಲೇಜುಗಳಲ್ಲಿ ಇವೆಯೇ? ಇಲ್ಲಿನ ಹುಡುಗರನ್ನೂ ಅಲ್ಲಿನ ಹುಡುಗರನ್ನೂ ಹೋಲಿಸಿ ನೋಡಿದರೆ ಇವರಿಗೂ ಅವರಿಗೂ ಸಂಬಂಧವೇ ಇರುವುದಿಲ್ಲ. ಈಗಲೂ ಮೆಡಿಕಲ್ ಸ್ಕೂಲು, ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜುಗಳಿಗೆ ಹುಡುಗರನ್ನು ತೆಗೆದುಕೊಳ್ಳುವಾಗ ಎಲ್ಲಾ applicants ಗಳ ಪರೀಕ್ಷೆಯ ಅಂಕಗಳ ಪಟ್ಟಿಯೊಂದನ್ನು ಮಾಡಿಕೊಂಡಿರುತ್ತಾರೆ. ಅದರಲ್ಲಿ ನೋಡಿದರೆ ಇಲ್ಲಿನ ಹುಡುಗರ ಸರಿಸಮಾನಕ್ಕೆ ಬೇರೆ ಊರುಗಳ ಹುಡುಗರು ಎಂದಿಗೂ ಬರುವುದಿಲ್ಲ. ಆದ್ದರಿಂದ ಪಟ್ಟಣದಲ್ಲಿರತಕ್ಕ ತರಬಿಯತ್ತಿಗೂ ಹಳ್ಳಿಯಲ್ಲಿರತಕ್ಕ ತರಬಿಯತ್ತಿಗೂ ಹೊಂದಿಕೆಯಾಗುವುದಿಲ್ಲ. ಈ ದೃಷ್ಟಿಯಿಂದ ಪ್ರೈಮರಿ ಸ್ಕೂಲು ವಿದ್ಯಾಭ್ಯಾಸ ಕ್ರಮ ಸಾಹೋಗುವುದಿಲ್ಲ, ದೇಶದ ಹಿತದೃಷ್ಟಿಯಿಂದ ಅದು ಬಹಳಕಷ್ಟವಿದು.

ಆಮೇಲೆ ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಹತ್ತಾರು ವೃತ್ತಿ ಶಿಕ್ಷಣ ಬಾಬುಗಳನ್ನು ತರುತ್ತೀರಿ. ಅಲ್ಲಿಂದಲೇ ಹುಡುಗರನ್ನು ನಾನಾ ಮಾರ್ಗಗಳಿಗೆ bifurcate ಮಾಡಬೇಕೆಂದು ಹೇಳಿ ಬಡಗಿಕೆಲಸ, ಕಮ್ಮಾರನಕೆಲಸ, ಬೇಸಾಯ ಮುಂತಾಗಿ ಅನೇಕ ವೃತ್ತಿಶಿಕ್ಷಣಕ್ಕೆ ಏರ್ಪಾಡು ಮಾಡುತ್ತೇವೆಂದು ಹೇಳುತ್ತೀರಿ. ಆದರೆ ನಿಮ್ಮಂತೆ ಎಲ್ಲಾ ಮುನಿಸಿಪಲ್ ಹೈಸ್ಕೂಲಿನವರೂ ಏರ್ಪಾಡಿಸುವುದಕ್ಕೆ ಸಾಧ್ಯವೇ? ಈಗಲೇ ಮುನಿಸಿಪಲ್ ಹೈಸ್ಕೂಲುಗಳ ಭಾರವನ್ನು ಮುನಿಸಿಪಾಲಿಟಿಗಳವರು ಹೊರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವಾಗ ಈ ಹೊಸ ಏರ್ಪಾಡುಗಳನ್ನು ಬೇರೆಮಾಡುವುದು ಹೇಗೆ ಅಥವಾ ಇನ್ನು ಮುಂದೆಯಾರಾದರೂ ಮುನಿಸಿಪಾಲಿಟಿಯವರು ಹೈಸ್ಕೂಲು ಮಾಡುತ್ತೇವೆಂದು ಹೇಳಿದರೆ, ನೀವೇ ಒಂದು ಪಾಲು ಹಣವನ್ನು ಅವರಿಂದ ತೆಗೆದುಕೊಂಡು ಅವುಗಳ ಮಾನೇಜ್‌ಮೆಂಟ್ ವಹಿಸಿಕೊಳ್ಳುವುದಾಗಿ ಹೇಳುತ್ತೀರಾ? ಸರ್ಕಾರಿ ಹೈಸ್ಕೂಲುಗಳು ಈಗ ಇರುವುದೆಲ್ಲಾ 37-38 ಸ್ಕೂಲುಗಳು. ಮಿಕ್ಕ ಹೈಸ್ಕೂಲುಗಳ ಸಂಖ್ಯೆ 120 ರಮೇಲಿದೆ. ಹೀಗಿರುವಾಗ, ನೀವು ಮಾಡುವ ಏರ್ಪಾಡುಗಳಿಗೆ ತಕ್ಕಂತೆ ಬೇರೆ ಮೆಜಾರಿಟಿ ಸ್ಕೂಲುಗಳವರೂ ಮಾಡಬೇಕೆಂದರೆ ಹೇಗೆ?

ಈ ಪ್ರಕಾರ ಪ್ರೈಮರಿಸ್ಕೂಲುಗಳ ವಿಷಯದಲ್ಲಿ, ಹೈಸ್ಕೂಲುಗಳ ವಿಷಯದಲ್ಲಿ ತೊಂದರೆ ಬಂತು. ಅಲ್ಲಿಂದ ಮುಂದೆಬಂದರೆ ಏನು ಮಾಡುತ್ತೀರಿ ನೋಡೋಣ. ಇಂಟರ್ ಮೀಡಿಯಟ್ ಕಾಲೇಜನ್ನು ಇನ್ನೊಂದು Bigger High School ಎಂದು ಮಾಡಿದ್ದೀರಿ. ಅಲ್ಲೇನೂ leading to several courses ಎಂದು ಬೇರೆ ಬೇರೆ ಭಾಗಗಳನ್ನು ತೋರಿಸಿಲ್ಲ. ಬೇರೆಬೇರೆ ರೆಕ್ಕೆಗಳೇನನ್ನೂ ತೋರಿಸಿಲ್ಲ. ಆದ್ದರಿಂದ ಇಂಟರ್ ಮೀಡಿಯೆಟ್ ಕಾಲೇಜನ್ನು ಹೈಸ್ಕೂಲಿಗೆ ಸೇರಿಸುವುದರಲ್ಲಿ ಅನೇಕ ಕಷ್ಟಗಳಿವೆ. ಅಲ್ಲಿನ ಕರಿಕ್ಯುಲಂ ಬದಲಾವಣೆಯಾಗಿದೆ. ವೃತ್ತಿಗಳೇ ಬೇಕಾದಷ್ಟು ಬದಲಾವಣೆಯಾಗಿವೆ. ಇದೆಲ್ಲಾಮಾಡಿ ಕಾಲೇಜ್ ಕಾಲೇಜನ್ನೇ ಬೇರೆಕಡೆಗೆ ತೆಗೆದುಕೊಂಡು ಹೋಗುವುದು, ನಾಲ್ಕು ವರ್ಷ ಇರುವ ಕೋರ್ಸನ್ನು ಆರು ವರ್ಷಮಾಡುವುದು, 6 ವರ್ಷದ ಕೋರ್ಸನ್ನು ನಾಲ್ಕು ವರ್ಷಮಾಡಿ ಜನರ fundamental rights ಗಳಿಗೇ ವಿರೋಧವಾದ ಉದರಾವಣೆಗಳನ್ನು ತರುವುದು ಸರ್ವಥಾ ಸರಿಯಲ್ಲ! 8 ವರ್ಷಗಳ ಕಾಲ ನಮ್ಮ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಇದುವರೆಗೂ ದೊರೆಯುತಿದ್ದುದನ್ನು 6 ವರ್ಷಕ್ಕೆ ಇಳಿಸುವುದಕ್ಕೆ ನಿಮಗೆ ಅಧಿಕಾರವೇನಿದೆ! ಇರುವುದನ್ನೇ ಕಮ್ಮಿಮಾಡಿರುವುದಲ್ಲದೆ ಮುಂದೆ ಇರಬೇಕಾದ್ದನ್ನೂ ಮೊಟಕುಮಾಡಿಬಿಟ್ಟಿರಿ "The State shall endeavour to promote Backward Classes" ಎಂದು Constitution ನಲ್ಲಿ ಹೇಳಿರುವುದರ ಅರ್ಥವೇನು? Endeavour ಮಾಡುವುದಕ್ಕೇ ಮಾರ್ಗವಿಲ್ಲದಿರುವಾಗ ಇನ್ನು endeavour ಮಾಡುವುದು ಎಲ್ಲಿ? The course is fixed. Therefore there is no question of making it a seven-year course or making it an eight-year course. There is secondary system immediately after he finishes the Primary Stage. ನಮಗೆ ಪ್ರೈಮರಿ ವಿದ್ಯಾಭ್ಯಾಸವನ್ನು 8 ವರ್ಷಗಳಕಾಲ ಉಚಿತವಾಗಿ ಕೊಡುವುದಕ್ಕೆ endeavour ಮಾಡುವುದಕ್ಕೆ ಅವಕಾಶವೇ ಇಲ್ಲದಂತಾಗಿದೆ.

ಹಾಗಾದರೆ ಇದನ್ನು improve ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುವುದಾದರೆ ಸಾಧ್ಯವಿದೆಯೆಂದು ನಾನು ಅಭಿಪ್ರಾಯ ಪಡುತ್ತೇನೆ. ಆ ಬಗ್ಗೆ ಕೆಲವು ಒಳ್ಳೆಯ ಸಲಹೆಗಳುಕೂಡ ಈಗ ಸಭೆಯ ಮುಂದೆ ಬಂದಿವೆ. ಈ ಸುಧಾರಣೆಗಳಲ್ಲೂ ಕೆಲವು ಸೂಚನೆಗಳು ನನ್ನಾಗಿವೆ. ಹುಡುಗರಿಗೆ 6ನೆಯ ವರ್ಷದಿಂದ 10ನೆಯ ವರ್ಷದವರೆಗೆ ಒಳ್ಳೆಯ receptive age. ಅನೇಕ ವಿಷಯಗಳನ್ನು ಸಂಗ್ರಹಿಸಿಕೊಳ್ಳಬಲ್ಲ ಕಾಲ ಅದು. ಇಂದಿಗೂ ನಾವು ನಮ್ಮ ಚಿಕ್ಕವಯಸ್ಸಿನಲ್ಲಿ ಕಲಿತ ಮಗ್ಗಿಕೋಷ್ಟಕ, ಅಮರಕೋಶ 'ಸ್ಯುರ್ ವ್ಯಯಂ ಸ್ವರ್ಗನಾಕಃ' ಮೊದಲುಗೊಂಡು ಕೊನೆಯವರೆಗೂ ಜ್ಞಾಪಕವಿದೆ. ಆತನಿಗಿನ್ನೂ ಯಾವ ವೃತ್ತಿಯನ್ನೂ ಮಾಡುವಷ್ಟು ತೋಳಿನಬಲವಿಲ್ಲ. ತೋಳಿನ ಬಲ ಬಂದ ಮೇಲೆ ವೃತ್ತಿಶಿಕ್ಷಣ ಮಾಡುವುದಕ್ಕೆ ಏರ್ಪಾಡುಮಾಡಿ. ಹೈಸ್ಕೂಲಿಗೆ ಬಂದಾಗ ವೃತ್ತಿಶಿಕ್ಷಣವೆನ್ನುವುದು ಸರಿ. ಅಷ್ಟೇ ಹೊರತು ಹುಡುಗನು ಪ್ರೈಮರಿ ಪಾಠಶಾಲೆಯಲ್ಲಿರುವಾಗಲೇ

(ಶ್ರೀ ಎ. ಭೀಮಪ್ಪನಾಯಕ್.)

ತಂದೆಯು ಜೊತೆಯಲ್ಲಿಹೋಗಿ ಏನು ವ್ಯತ್ತಿ ಕಲಯುತ್ತಾನೆ? ಅವನಿಗೇನು ಸಹಾಯ ಮಾಡಿಯಾನು? ಆಮೇಲೆ ಇಂಟರ್‌ಮೀಡಿಯಟ್ ಕಾಲೇಜಿಗೆ ಬಂದಾಗ Bifurcation of courses ಎಂದು courses leading to Medicine, courses leading to Engineering, courses leading to General Education— ಈ ರೀತಿಯಾಗಿ ಬೇರೆ ಬೇರೆ ಮಾಡಿ ಒಬ್ಬ ಹುಡುಗನಿಗೆ ಅವನ ಧ್ಯೇಯವೇನೋ ಅವಕ್ಕನುಗುಣವಾಗಿ ಅವಕಾಶ ಕೊಡಿ. ಒಂದು ಕೋರ್ಸು ಸಿಕ್ಕದೆ ಇದ್ದರೆ ಇನ್ನೊಂದು ಕೋರ್ಸಿಗೆ ಹೋಗಲು ಎನ್ನುವುದು ಬೇಡ. ಏಕೆಂದರೆ ಅವನಿಗೆ efficiency ಇರುವುದಿಲ್ಲ; ಅದು ಅವನು ಇಷ್ಟಪಟ್ಟು ಕಲಿತಿದ್ದಲ್ಲ. ಸಾಧಾರಣವಾಗಿ ಬೇರೆ ದೇಶಗಳಲ್ಲಿ ಇದ ಕ್ಕಾಗಿಯೇ ಮನಶಾಸ್ತ್ರಜ್ಞರನ್ನೇ ಇಟ್ಟು ಪ್ರತಿಯೊಬ್ಬ ಹುಡುಗನನ್ನು ಮುಂದೆ ಯಾವ ರೀತಿ ದಕ್ಷನಾಗಬಲ್ಲ ಎಂಬುದನ್ನು ನಿರೀಕ್ಷೆಮಾಡಿ ನೋಡಿ ಅವನಿಗೆ ಮೊದಲಿನಿಂದೇ ಈರೀತಿಯಾಗಿ ದಾರಿ ತೋರಿಸುತ್ತಾರೆ. ನಮ್ಮಲ್ಲಾದರೋ ಕಾಲೇಜಿಗೆ ಹೋಯಿತೆಂದರೆ ನೂಕು ನುಗ್ಗಲು. ಟೆಕ್ನಿಕಲ್ ಕೋರ್ಸು ಸಿಕ್ಕುವುದೇ ದುರ್ಲಭ. ಆದ್ದರಿಂದ ಟೆಕ್ನಿಕಲ್ ಕೋರ್ಸ್‌ಗೆ ಅವಕಾಶವಿರುವಂತೆ ಹೈಸ್ಕೂಲಿನಲ್ಲೇ mould ಮಾಡಿ. ಹೈಸ್ಕೂಲು ವಿದ್ಯಾಭ್ಯಾಸದಲ್ಲಿ technical outlook ಇರುವಂತೆ ಮಾಡಿ. ಅದು ಬಿಟ್ಟು ಹುಡುಗನ ಅತಿ ಮುಖ್ಯವಾದ ಕಾಲವನ್ನು ತಂದೆಗೆ ಸಹಾಯ ಮಾಡುವುದಕ್ಕೆಹಿಡುವುದಕ್ಕೆ ಬದಲಾಗಿ ಅತ ಶಕ್ತನಾಗಿ ವಿದ್ಯಾವಂತನಾದ ಮೇಲೆ ತಂದೆಗೆ ಸಹಾಯ ಮಾಡುವಂತೆ ಮಾಡಿ. ಈಗಿರತಕ್ಕ ವಿದ್ಯಾಭ್ಯಾಸದಲ್ಲಿ ಏನು ಅನಾನುಕೂಲತೆಗಳಿವೆ ಎಂಬುದನ್ನು ನೋಡಿ. ನೀವು ಹೇಳತಕ್ಕ ಬೇಸಿಕ್ ಶಿಕ್ಷಣ ಪದ್ಧತಿ ಅಲ್ಲಲ್ಲ. ಇದಕ್ಕಾಗಿ ಇಟ್ಟಿರುವ ವ್ಯವಸಾಯದ ಶಾಲೆ ಮುಂತಾದುವುಗಳ ಕಲಸಕಾರ್ಯಗಳು ಹೇಗಿವೆಯೆಂಬುದನ್ನು ಪುನರ್ವಿಮರ್ಶೆ ಮಾಡಿ ನೋಡಿ. ಅವುಗಳಿಂದ ಎಷ್ಟುಮಟ್ಟಿಗೆ ಉಪಯೋಗವಾಗಿದೆಯೆಂಬ ಬಗ್ಗೆ ರಿಪೋರ್ಟ್ ತರಿಸಿಕೊಳ್ಳಿ. ಅಲ್ಲಿರತಕ್ಕ ಅನುಕೂಲತೆಗಳನ್ನು ಎಲ್ಲರಿಗೂ ಉಂಟುಮಾಡಿಕೊಡುವುದಕ್ಕೆ ಸಾಧ್ಯವಿದೆಯೇ, ನೋಡಿ. ಹೊಸದಾಗಿ ಒಬ್ಬ ಹುಡುಗ ಒಂದು ಕಡೆಯಿಂದ ಇನ್ನೊಂದು ಕಡೆಗೆ ಬಂದರೆ ಅವನಿಗೆ ತಕ್ಕ ಹಾಸ್ಟಲ್ ಸೌಲಭ್ಯಗಳೇನಾದರೂ ಇವೆಯೇ ಎಂಬುದನ್ನು ನೋಡಬೇಕು. ಇದನ್ನೆಲ್ಲಾ ಬಿಟ್ಟು ನೀವು ಪ್ರೈಮರಿ ಸ್ಕೂಲನಲ್ಲೇ 5-6ನೆಯ ತರಗತಿಗೆ ಬಂದತಕ್ಷಣ ಬೇರೆ ಕಡೆಗೆ ಹುಡುಗನನ್ನು ಓದುವುದಕ್ಕೆ ಕಳುಹಿಸಬೇಕೆಂದರೆ ಸಾಧ್ಯವೇ? ಆ ಚಿಕ್ಕ ಹುಡುಗುಗೆ ನಿತ್ಯವೂ ಅಷ್ಟು ನಡೆಯುವುದಕ್ಕಾಗುತ್ತದೆಯೇ? ಆದ್ದರಿಂದ ಈಗಿರತಕ್ಕ ಪದ್ಧತಿಯಲ್ಲೇ ಸೂಕ್ತವಾದ ಬದಲಾವಣೆಗಳನ್ನುಮಾಡಿ, ಅದಕ್ಕೇ ಬೇರೆ curricular courses ಗಳನ್ನು ಸೇರಿಸಿ. ಈಗ "ಪ್ರೈಮರಿ 4ನೆಯ ತರಗತಿಯಲ್ಲೂ ಚರಿತ್ರೆ, ಭೂಗೋಳಗಳನ್ನು ಹೇಳಿಕೊಡುತ್ತಿದ್ದೇವೆ, ಅದನ್ನೇ ಮಿಡ್ಲ್‌ಸ್ಕೂಲುಗಳಲ್ಲೂ ಮೊದಲನೆಯ ವರ್ಷ ಹೇಳಿಕೊಡುತ್ತಾರೆ. ಇದು overlap ಆಗುವುದರಿಂದ ಈ ಭಾಗದಲ್ಲಿ ಕಾಲವನ್ನು ಕಮ್ಮಿ ಮಾಡಿದ್ದೇವೆ, ಹಾಗೆಯೇ ಮಿಡ್ಲ್‌ಸ್ಕೂಲನಲ್ಲಿ ಮಾಡಿದ್ದೇವೆ. ಹೈಸ್ಕೂಲನಲ್ಲಿ ಮಾಡುತ್ತಿದ್ದ ಪಾಠ overlap ಆಗುವುದರಿಂದ ಅಲ್ಲೂ 6 ತಿಂಗಳು ಕಡಮೆ ಮಾಡಿದ್ದೇವೆ, ಹೀಗೆ ಒಟ್ಟು ಒಂದು ವರ್ಷ ಉಳಿಸಿದ್ದೇವೆ" ಎಂದು ನೀವು ಹೇಳುತ್ತೀರಿ. ಭೂಗೋಳ, ಚರಿತ್ರೆ ಅವರು ಹೇಳಿದಂತೆ ಒಂದಿಷ್ಟು overlap ಆದ ಮಾತ್ರಕ್ಕೇ ವಿಜ್ಞಾನ ಪಾಠಗಳೂ overlap ಆಗುತ್ತಿವೆಯೇ ಏನು? ಒಂದು ವೇಳೆ overlap ಆಗಿದ್ದರೆ ಮುಂದಕ್ಕೆ ಹೇಳಿಕೊಡುವುದಕ್ಕೆ ಸಾಧ್ಯವಿಲ್ಲವೇ? Except those two subjects no other subject has overlapped. ಇಷ್ಟುಮಾತ್ರದಿಂದಲೇ ಒಟ್ಟು courseನಲ್ಲಿ ಒಂದು ವರ್ಷ ಉಳಿಸಿದೆಯೆಂಬುದು ಸರಿಯಲ್ಲ. ಅಲ್ಲದೆ ಅಖಿಲ ಭಾರತ ವಿದ್ಯಾಶಿಕ್ಷಣ ಭಾಗಗಳು uniform ಆಗಿರಬೇಕು. ಆದ್ದರಿಂದ ಅಖಿಲ ಭಾರತದ ರಿಪೋರ್ಟ್ ಈ ಸಂದರ್ಭದಲ್ಲಿ ಬಾಯಿಬರುವವರೆಗೂ ಈಗಿರುವಂತೆಯೇ ಇರುವುದು ಒಳ್ಳೆಯದು.

4-30 P.M.

ಇದು ಬಂದ ಮೇಲೆ ನಮ್ಮ ಬದಲಾವಣೆಗಳನ್ನು ಸೂಕ್ತ ಕಂಡಂತೆ ಮಾಡಿ ಅದನ್ನನುಸರಿಸೋಣ.

ಈಗ 'ಮಿಡ್ಲ್‌ಸ್ಕೂಲ್ ಪರೀಕ್ಷೆಕ್ಕೆ ಇಡುವುದರಿಂದ ಮಕ್ಕಳಿಗೆ ಭಾರವಾಗುತ್ತದೆ,ಅವರಿಗೆ ಕಷ್ಟವಾಗುತ್ತದೆ, ಅವರ ಮನಸ್ಸಿಗೆ ಏಟು ಬೀಳುತ್ತದೆ' ಎಂದು ಹೇಳಿದ್ದಾರೆ. ಒಬ್ಬ ವಿದ್ಯಾರ್ಥಿಗೆ ಹದಿನಾರು ವರ್ಷಗಳವರೆಗೆ ಯಾವ ಪರೀಕ್ಷೆಯೂ ಇಲ್ಲದೆ ಸುಮ್ಮನಿದ್ದು ಅವನು ಮೊಟ್ಟ ಮೊದಲನೆಯ ಸಾರಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದರೆ ಅವನಿಗೆ ಕಷ್ಟವಾಗುವುದಿಲ್ಲವೆ! ಒಂದು ನಣ್ಣ ಗೋಡೆಯನ್ನು ಒಂದು ಕಡೆ ಹಾಕಿ ಅನುಭವ ಪಡೆದ ಮೇಲೆ ಇನ್ನೊಂದು ಕಡೆ ಗೋಡೆ ಹಾಕಿದರೆ ಅದು ಗಟ್ಟಿಯಾಗಿರುತ್ತದೆ, ಭಾರ ತಡೆಯುತ್ತದೆ. ಸ್ವಲ್ಪ ಸ್ವಲ್ಪವಾಗಿ ಅನುಭವ ಪಡೆಯಬೇಕು. ಎಲ್ಲದರಲ್ಲಿಯೂ ಹಾಗೆಯೇ. ಮೊದಲಿನಿಂದಲೂ ಅನುಭವ ಪಡೆಯಲು ಪ್ರಯತ್ನಪಡಬೇಕು. ಆದುದರಿಂದ ಹುಡುಗ ಮಿಡ್ಲ್‌ಸ್ಕೂಲು ಪರೀಕ್ಷೆಗೆ ಕುಳಿತು ಅವನಿಗೆ ಧೈರ್ಯ ಬರುವಂತೆ ಮಾಡಿದರೆ ಒಳ್ಳೆಯದು. ಒಂದು ವೇಳೆ ಬೇಕಾದರೆ ಈ ಪರೀಕ್ಷೆ ಈಗಿರುವಂತೆ ಬೇಡ. ಬೇರೆ ರೀತಿ ಇರುವಂತೆ ಮಾಡಬಹುದು. ಅಮೆರಿಕಾದಲ್ಲಿ ಬೇರೆ ಹೆಸರು ಕೊಡುತ್ತಾರೆ, ಹಾಗೆ ಮಾಡಬಹುದು.

ಸೆಕೆಂಡರಿ ಕೋರ್ಸ್ ಮೊದಲನೆಯ ತರಗತಿಗೆ ಬರುವುದರಲ್ಲಿ ಇಂಗ್ಲಿಷ್ ಕನ್ನಡ ಎರಡು ಭಾಷೆಗಳಲ್ಲಿಯೂ ಯಾವುದನ್ನಾದರೂ ಅರ್ಥಮಾಡಿಕೊಳ್ಳುವ ಶಕ್ತಿಯಿರಬೇಕು. ಇದು ಆಗಬೇಕಾದರೆ ಐದಾರು ವರ್ಷಗಳಲ್ಲಿ ಸಾಧ್ಯವಾಗುವುದಿಲ್ಲ ಇಲ್ಲದಿದ್ದರೆ ಹೈಸ್ಕೂಲ್ ಸ್ಟಾಂಡರ್ಡ್‌ನಲ್ಲೇ ಇಳಿಸಬೇಕು. ಹೈಸ್ಕೂಲಿನಲ್ಲಿ ಕನ್ನಡದಲ್ಲೇ ಮಾಡಿಸಿಹುದು, ಇಂಗ್ಲಿಷ್ ವಿದ್ಯಾಭ್ಯಾಸವೇ ಬೇಡ, ಎಂದು ಕನ್ನಡದಲ್ಲೇ ಮಾಡಬಹುದು. ಹಾಗೆ ಆಗಾಗ ಬದಲಾವಣೆ ಮಾಡಿದರೆ ಸೇರಿಕೊಳ್ಳತಕ್ಕವರೂ, ಈಗಾಗಲೇ ಇರತಕ್ಕವರೂ ಕೂಗಿ ಮೊದಲು ಇದನ್ನು ತೆಗೆದು ಹಾಕಿ ಎಂದು ಹೇಳುತ್ತಾರೆ. ಹಳ್ಳಿಯವರಿಗೆ ತೊಂದರೆ ಮಾಡಿದರೆ ಚಿಂತೆಯಿಲ್ಲ, ಸುಮ್ಮನಿರುತ್ತಾರೆ ಎಂದು ಭಾವಿಸಿದರೆ ಅದು ತಪ್ಪು. ಈಗ ಹಳ್ಳಿಯವರಿಗೂ ವಿಷಯಗಳು ಗೊತ್ತಿವೆ. ಆದುದರಿಂದ ಹಾಗೆ ಮಾಡಬೇಡಿ.

ಇಂಟರ್‌ಮೀಡಿಯೆಟ್ ಕಾಲೇಜುಗಳನ್ನು ವಿಶ್ವವಿದ್ಯಾನಿಲಯದಿಂದ ತಪ್ಪಿಸಿ ವಿದ್ಯಾಭ್ಯಾಸದ ಜವಾಬ್ದಿಗೆ ಕೊಟ್ಟಿನೆ, ಇವಕ್ಕಿಂತ ದೊಡ್ಡ ಅಪರಾಧ ಇನ್ನಿಲ್ಲವೆಂದು ಹೇಳುತ್ತೇನೆ. ಇದು ಖಂಡಿತವಾಗಿಯೂ ಕಾಲೇಜುಗಳ ಜೊತೆಗೇ ಇರಬೇಕು; Intermediate leading to some definite course ಆಗಿರಬೇಕು. ಇದರಲ್ಲಿ ಮುಂದೆ ನಿರ್ದಿಷ್ಟವಾವ ಒಂದು ಕಡೆ ಹೋಗುವ ಹಾಗಿರಬೇಕು. ಈಗ ಅಲ್ಲಿ ಕೊಡುವ ಶಿಕ್ಷಣವನ್ನು 'Jack of all trades but master of none' ಅನ್ನುವ

ರೀತಿ ಮಾಡುತ್ತಿದ್ದೀರಿ. ಅಲ್ಲಿಗೆ ಹೋದ ಪ್ರತಿಯೊಬ್ಬ ಹುಡುಗನೂ ತನ್ನ ಗುರಿ, ಧ್ಯೇಯ ಹೇಗಿದೆಯೋ ಅದನ್ನು ಕೊನೆಯಲ್ಲಿ ಮುಟ್ಟುವ ಹಾಗಿರಬೇಕು. ಇರುವುದರಲ್ಲೇ ಸ್ವಲ್ಪ ಬದಲಾವಣೆ ಮಾಡಿ ಈರೀತಿ ಮಾಡಬಹುದು. ಈಗ ವಿಶ್ವವಿದ್ಯಾನಿಲಯಕ್ಕೆ ಕೊಡುತ್ತಿರುವ ಹಣದಲ್ಲಿಯೇ ಈ ಬದಲಾವಣೆಯನ್ನು ಮಾಡಬಹುದೆಂದು ನನ್ನ ಅಭಿಪ್ರಾಯ. ಹೀಗೆ ನಾವು ನಿಧಾನವಾಗಿ ಹೋಗಬೇಕು. ಮೊದಲೇ ನಾಗಾಲೋಟ ಓಡಿ ಬದ್ದು ಕೈಕಾಲುಗಳನ್ನು ಪೆಟ್ಟುಮಾಡಿಕೊಳ್ಳಬಾರದು.

ಈಗ ಅನೇಕ ಕಡೆ ವ್ಯವಸಾಯದ ಸ್ಕೂಲುಗಳನ್ನು ಏರ್ಪಾಡುಮಾಡಿದ್ದಾರೆ, ಅವುಗಳನ್ನು ಅಭಿವೃದ್ಧಿಮಾಡಿ. stage by stage build up ಮಾಡಿ. ಬೇರೆ ಬೇರೆ ಸೂಚನೆಗಳನ್ನು ಜನರ ಮುಂದಿಡಿ. ಪ್ರಯೋಗಾರ್ಥವಾಗಿ ಮಾಡಿ. ಅವರಿಗೆ ನರಿಹೊಂದುವುದನ್ನು ಅವರೇ ಆರಿಸಿಕೊಳ್ಳಲಿ. ಹೈಸ್ಕೂಲು ಶಿಕ್ಷಣ ಕ್ರಮವನ್ನು ಕೇಂದ್ರ ಸರ್ಕಾರದಿಂದ ಸಲಹೆ ಬರುವವರೆಗೆ ನಾವು ಬದಲಾವಣೆ ಮಾಡುವ ಹಾಗಿಲ್ಲ. ಆದುದರಿಂದ ನಾವು ಏನೇ ಬದಲಾವಣೆ ಮಾಡಿದರೂ ಮೂಲದಲ್ಲಿ ಒಂದು experiment ಆಗಿ ಪ್ರಾರಂಭಮಾಡಿ, ಅದರಲ್ಲಿ ಜನತೆಯಲ್ಲಿ ಉತ್ಸಾಹ ಬರುವಹಾಗೆ ಮಾಡಿ, ಅವರಲ್ಲಿ ಪ್ರೀತಿಹುಟ್ಟಿಸಿ, ಆಮೇಲೆ ಮಾಡಿದರೆ ಮತ್ತು ಅದರಿಂದ ನಮಗೆ ಅನುಕೂಲವೆಂದು ತಿಳಿದ ಮೇಲೆ ಅದನ್ನು ಒಪ್ಪಬಹುದು. ಆದರೆ ಈಗ ಮಾಡಿರುವ ರೀತಿಯಲ್ಲಿ ಹೇಗಿದೆಯೆಂಬುದನ್ನು ನನ್ನ ಸ್ನೇಹಿತರೊಬ್ಬರು ಡಾ॥ ಪುರುಷೋತ್ತಮ್ ಎಂಬುವರು ಹೇಳಿದರು. ಇದು retrograde, reactionary and undemocratic ಎಂದು ಹೇಳಿದರು. ಬರಿಯ alliteration 'round and round the rugged rascal ran' ಎಂಬ ಹಾಗಲ್ಲ, ಸರಿಯಾಗಿ ಅರ್ಥವಾಗುವ ರೀತಿಯಲ್ಲಿ ಹೇಳಿದರು. ನನ್ನ ಅಭಿಪ್ರಾಯವೂ ಅಷ್ಟೆ. ಈಗಿನ ಕ್ರಮದಿಂದ ಪ್ರಯೋಜನವಾಗುತ್ತಿದೆ, ಇದನ್ನು ಹೀಗೆಯೇ ಇಟ್ಟರೆ ದೇಶಕ್ಕೆ ಅಪಘಾತವಾಗುವುದಿಲ್ಲವೆಂದು ನನ್ನ ಅಭಿಪ್ರಾಯ.

*ಶ್ರೀ ಟಿ. ಮರಿಯಪ್ಪ (ಮ್ಯೂನೂರು ಸಿಟಿ-ಉತ್ತರ).—ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರಾದ ಶ್ರೀ ಭೀಮಪ್ಪ ನಾಯಕರು ಮಾತನಾಡಿದ ಮೇಲೆ ಸ್ವಲ್ಪಕಾಲ ಬಿಟ್ಟು ನಾನು ಮಾತನಾಡಬೇಕೆಂದಿದ್ದೆ. ಆದರೆ ತಾವು ಸಭೆಯನ್ನು ನೋಡಿ ಯಾರೂ ಮಾತನಾಡಲು ಏಳಲಿಲ್ಲವೆಂದು ಹೇಳಿದ ಮೇಲೆ, ಇರತಕ್ಕ ಅವಕಾಶವನ್ನು ತಮ್ಮ ಯೋಗಿಸಿಕೊಳ್ಳಬೇಕೆಂದು ನಿರ್ಧರಿಸಿದ್ದೇನೆ. ವಿದ್ಯಾಭ್ಯಾಸ ಸುಧಾರಣೆಯ ವಿಚಾರದಲ್ಲಿ ಶ್ರೀ ಭೀಮಪ್ಪನಾಯಕರು ಬಹಳ ವಿಶದವಾಗಿ ಹೇಳಿದ್ದಾರೆ. ವಿದ್ಯಾಭ್ಯಾಸ ಸುಧಾರಣೆಗಳು ಬಹಳ ಅವಶ್ಯಕ, ಆಗಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಯಾವ ಯಾವ ಕಾಲಕ್ಕೆ ಯಾವ ಯಾವ ವಿಧವಾದ ವಿದ್ಯಾಭ್ಯಾಸ ಪದ್ಧತಿ ದೇಶದಲ್ಲಿರಬೇಕೋ ಅದಕ್ಕೆ ಆಯಾ ಕಾಲದಲ್ಲಿದ್ದ ನಾಯಕರು ಪ್ರಯತ್ನಮಾಡುವುದು ಸ್ವಾಭಾವಿಕ. ನಮ್ಮ ದೇಶಕ್ಕೆ ಬ್ರಿಟಿಷರು ಬಂದ ಮೇಲೆ ಅವರ ನೀತಿಗನುಗುಣವಾದ ವಿದ್ಯಾಭ್ಯಾಸ ಕ್ರಮ ಜಾರಿಗೆಬಂತು. ಮೈಸೂರು ದೇಶ ಒಂದು ದೇಶೀಯ ಸಂಸ್ಥಾನವಾಗಿದ್ದರೂ ಬ್ರಿಟಿಷರ ನೀತಿಗೊಳಗಾಗಿತ್ತೇ ಹೊರತು ಹೊರಗಾಗಿರಲಿಲ್ಲ. ನಮಗಾದ 99 ವರ್ಷಗಳ ಕೆಳಗೆ ಯಾವ ಒಂದು ವಿದ್ಯಾಭ್ಯಾಸ ಕ್ರಮ ನಮ್ಮ ದೇಶದಲ್ಲಿ ಜಾರಿಗೆ ಬಂತೋ ಹೆಚ್ಚುಕಡಮೆ ಅದೇ ಕ್ರಮ ಇಲ್ಲಿಯವರೆಗೂ ನಡೆದುಕೊಂಡು ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದರೂ ಈಗಿನ ಜನಾಂಗ ಕೃತಜ್ಞತೆಯಿಂದ ಸ್ಮರಿಸಬೇಕಾದ ಒಂದು ವಿಷಯವಿದೆ. ಈ 99 ವರ್ಷಗಳಲ್ಲಿ ಅನೇಕಸಲ ರಾಜಕಾರಣಿಗಳೂ ರಾಜರೂ ದೇಶಭಕ್ತರೂ ಈ ವಿದ್ಯಾಭ್ಯಾಸ ಪದ್ಧತಿಯಲ್ಲಿ ಅಲ್ಪಸ್ವಲ್ಪವಾದರೂ ಮಾರ್ಪಾಡು ಮಾಡಬೇಕು, ಹೇಗೆ ಮಾಡಿದರೆ ದೇಶದ ಹಿತದೃಷ್ಟಿಯಿಂದ ಉತ್ತಮ ಎಂಬುದನ್ನು ಯೋಚಿಸಿ, ಪ್ರಯತ್ನಮಾಡಿ ವಿದ್ಯಾಭ್ಯಾಸದ ವಿಷಯಗಳನ್ನು, ಎಂದರೆ, contents ಸ್ವಲ್ಪ ಬದಲಾವಣೆ ಮಾಡಿದರು. ಇದರಲ್ಲಿ ಸ್ವಲ್ಪಮಟ್ಟಿಗೆ ಸಫಲತೆಯನ್ನು ಪಡೆದಿದ್ದಾರೆ. ತೀವ್ರವಾದ ಬದಲಾವಣೆಗಳಾಗುವುದಕ್ಕೆ ದೇಶದಲ್ಲಿ ಅಡ್ಡಿ ಆತಂಕಗಳಿದ್ದುವು. ಈ ದೃಷ್ಟಿಯಿಂದ ಮೈಸೂರು ದೇಶ ಒಂದು ಸಂಸ್ಥಾನವಾಗಿದ್ದರೂ, ದೇಶೀಯ ರಾಜರ ಕೆಳ್ಪಿಕೆಗೆ ಒಳಗಾಗಿದ್ದರೂ ಇಲ್ಲಿ ದಕ್ಷರಾದ ದಿವಾನರುಗಳಿದ್ದರೂ, ದೂರದರ್ಶಿತ್ವ ಹೊಂದಿದ್ದ ರಾಜರುಗಳಿದ್ದರೂ ವಿಶೇಷ ಮಾರ್ಪಾಟನ್ನು ಮಾಡುವುದಕ್ಕೆ ಬಹಳ ಕಷ್ಟವಾಯಿತು. ಅಲ್ಲದೆ ನಾನಾಗಲೇ ಹೇಳಿದಂತೆ, ಆಯಾ ಕಾಲಕ್ಕನುಗುಣವಾಗಿ ವಿದ್ಯಾಭ್ಯಾಸ ಕ್ರಮ ಬದಲಾವಣೆಯಾಗಬೇಕು. ನಮಗೆ ಎಂತಹ ವಸ್ತುಬೇಕೋ ಅಂಥಾ ವಸ್ತುವನ್ನು ತಯಾರುಮಾಡಬೇಕಾಗುತ್ತದೆ. ನಾನಾ ಮುಖವಾಗಿ ಅಥವಾ ಬಹು ಮುಖವಾಗಿ ಅಭಿವೃದ್ಧಿ ಹೊಂದುವುದಕ್ಕೆ ಅಥವಾ ಬಹು ಮುಖವಾದ ಅಭಿವೃದ್ಧಿ ಹೊಂದುವ ಜನರನ್ನು ತಯಾರು ಮಾಡುವುದಕ್ಕೆ ಆಗ ಅವಶ್ಯಕತೆಯಿರಲಿಲ್ಲ, ಅವಕಾಶವಿರಲಿಲ್ಲ. ಒಂದುವೇಳೆ ತಯಾರುಮಾಡಿದ್ದರೂ ಸಮಾಜಕ್ಕೆ ಹೊಂದಿಸಿಕೊಳ್ಳುವುದಕ್ಕೆ ಕಷ್ಟವಾಗಿತ್ತು. ಆದುದರಿಂದ ಇಲ್ಲಿಯವರೆಗಿದ್ದ ಪದ್ಧತಿಯನ್ನು ಅವಹೇಳನ ಮಾಡಬೇಕಾಗಿಲ್ಲ. ಆದರೆ ಇದು ಈಹೊತ್ತಿನ ಪೂರ್ಯೆಕೆಗೆ, ಅವಶ್ಯಕತೆಗೆ ನರಿಹೊಂದುವುದಿಲ್ಲವೆಂದು ಹೇಳಬೇಕಾಗಿದೆ. ಈ ಒಂದು ದೃಷ್ಟಿಯಿಂದ ಈಗಿನ ವಿದ್ಯಾಭ್ಯಾಸ ಕ್ರಮವನ್ನು ಪರಿಶೀಲನಬೇಕು.

ದೇಶ ಸ್ವತಂತ್ರವಾದ ಮೇಲೆ ನಮ್ಮ ಅವಶ್ಯಕತೆಗಳು ನಾನಾ ಮುಖವಾಗಿವೆ. ನಮ್ಮ ದೇಶ ನಾನಾ ಮುಖವಾಗಿ ಅಭಿವೃದ್ಧಿ ಹೊಂದಬೇಕಾಗಿದೆ. ಈಗ ನಮಗೆ ನಾಯಕರೂ ಮೇಧಾವಿಗಳೂ ಬೇಕಾಗಿದ್ದಾರೆ, ಕೈಗಾರಿಕಾ ನಿಪುಣರೂ ವೈಜ್ಞಾನಿಕ ಸಂಶೋಧಕರೂ ಕಾರ್ಖಾನೆಗಳಲ್ಲಿ ಕೆಲಸವಾಡುವ ನಿಪುಣರೂ ಅನೇಕ ವಿದ್ಯಾವಂತ ಪಡೆಯೆರೂ ಬೇಕಾಗಿರುತ್ತಾರೆ. ಹೀಗೆ ನಮ್ಮ ಅವಶ್ಯಕತೆ ನೂರ್ಮಡಿ ಜಾಸ್ತಿಯಾಗಿದೆ. ಆದರೆ ಕ್ರಮೇಣ ವಿಸ್ತಾರವಾಗಬೇಕು. ಒಂದೇಸಾರಿ ದೇಶವನ್ನು ಅಭಿವೃದ್ಧಿ ಮಾಡುವುದಕ್ಕೆ ಹೇಗೆ ಸಾಧ್ಯವಿಲ್ಲವೋ ಹಾಗೆಯೇ ನಮ್ಮ ಅವಶ್ಯಕತೆಗಳ ಪೂರ್ಯೆಕೆ ಒಂದೇ ಸಾರಿ ಆಗುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು ಆರು ವರ್ಷವಾಯಿತು. ಈ ಆರು ವರ್ಷಗಳಲ್ಲಿ ಇನ್ನೂ ಅನೇಕ ವಿಷಯಗಳಲ್ಲಿ ದೇಶ ಪರಿಷ್ಕಾರಗೊಂಡಿಲ್ಲ; ಅಲ್ಲದೆ ದೇಶದ ಆರ್ಥಿಕ ಕ್ಷೇತ್ರದಲ್ಲಿ ಅನೇಕ ಬದಲಾವಣೆಯಾಗಬೇಕೆಂದು ಉದ್ದೇಶವಿದೆ. ಇದರಿಂದ ಪಂಚವಾರ್ಷಿಕ ಯೋಜನೆ ಜಾರಿಗೆ ಬಂದಿದೆ.

ಆದುದರಿಂದ ಈಗ ಒಂದುಕ್ರಮವಾದ ಮತ್ತು ಒಂದು ನಿರ್ದಿಷ್ಟವಾದ ಗುರಿಯನ್ನು ಮುಟ್ಟುವುದಕ್ಕೆ ಹೋಗುವಾಗ ಅದಕ್ಕೆ ಸಾಧಕವಾದಂಥ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತರುವುದು ಅವಶ್ಯಕವೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಇದನ್ನು ಪರಿಶೀಲನೆ ಮಾಡಬೇಕಾಗಿದೆ. ಈ ವರದಿಯನ್ನು ತಯಾರಿಸಲು ನೇಮಕವಾಗಿದ್ದ ಸಮಿತಿಯವರು ಬಹಳ ಕಷ್ಟಪಟ್ಟು ಕೆಲಸ ಮಾಡಿದ್ದಾರೆ. ಎಲ್ಲ ವಿಷಯಗಳನ್ನೂ ಚೆನ್ನಾಗಿ ಪರಿಶೀಲನೆ ಮಾಡಿದ್ದಾರೆ. ಯಾವ ಯಾವ ಕಾಲದಲ್ಲಿ ಏನೇನು ಲೋಪದೋಷಗಳು ಹೇಗೆ ಸೇರಿಕೊಂಡವು.

(ಶ್ರೀ ಟಿ. ಮರಿಯಪ್ಪ.)

ಎಂಬ ವಿಚಾರಗಳನ್ನೂ ತಿಳಿಸಿದ್ದಾರೆ. ಹಿಂದೆ ಯಾವ ಯಾವ ಮಹನೀಯರು ಆ ರೋಪದೋಷಗಳನ್ನೆಲ್ಲಾ ತಿದ್ದಲು ಏನೇನು ಪ್ರಯತ್ನಗಳನ್ನು ಮಾಡಿದ್ದಾರೆಂಬ ವಿಷಯಗಳನ್ನು ಹೇಳಿದ್ದಾರೆ. ಆದರೆ ಹಾಗೆ ಅವರು ಏನೇನು ಪ್ರಯತ್ನಗಳನ್ನು ಮಾಡಿದ್ದಾರೆಂಬ ಬಗ್ಗೆ ನಾನು ನನ್ನ ಮಾತುಗಳಲ್ಲಿ ಹೇಳುವುದಕ್ಕೆ ಬದಲಾಗಿ ಈ ವರದಿಯಲ್ಲಿ ಬರೆದಿರುವ ಆ ಪದಗಳನ್ನೇ ಓದಿದರೆ ಬಹಳ ಚೆನ್ನಾಗಿರುತ್ತದೆ:

"Worthy attempts have been made and far-sighted ideas have been suggested. One feels that if all the good things attempted on different occasions were to be pieced up together to make a coherent whole and just a few changes made to meet new requirements we may, perhaps, have a scheme of reform which may largely solve our present problems."

ಆದುದರಿಂದ ಈ ಕ್ಷೇತ್ರದಲ್ಲಿ ಹಿಂದೆ ದುಡಿದಿರತಕ್ಕಂಥ ಮಹನೀಯರುಗಳೆಲ್ಲಾ ಯಾರುಯಾರಿದ್ದಾರೋ ಅವರೆಲ್ಲರಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸುವುದು ಆವಶ್ಯಕವಾಗಿದೆ. ಮನುಷ್ಯನ ಜೀವನ ಯಾವಾಗಲೂ ದೇಶದಲ್ಲರತಕ್ಕ ನನ್ನಿವೇಶಗಳಿಗೆ ಹೊಂದಿಕೊಂಡು ಹೋಗಬೇಕಾಗಿರತ್ತದೆ. ಆದರೆ ಈಗ ದೇಶವು ಬಹುಮುಖವಾಗಿ ಬೆಳೆಯುತ್ತಿದೆ. ಈ ಎರಡು ದೃಷ್ಟಿಯನ್ನೂ ಗಮನದಲ್ಲಿಟ್ಟುಕೊಂಡು ಈ ಸಮಿತಿಯವರು ಈ ಪ್ರಯತ್ನ ಮಾಡಿದ್ದಾರೆ. ಈ ವಿದ್ಯಾಭ್ಯಾಸ ಹೇಗೆ ಬೆಳೆದುಕೊಂಡು ಬಂದಿದೆ ಎಂಬುದನ್ನು ಪರಿಶೀಲಿಸಿ, ಇದರಲ್ಲಿ ಅವರಿಗೆ ತೋರಿಬಂದ ಕೆಲವು ರೋಪದೋಷಗಳನ್ನು ಈಗ ದೇಶದ ಮುಂದೆ ಇಟ್ಟಿದ್ದಾರೆ. ಒಂದು ವಿಮರ್ಶನಾತ್ಮಕ ದೃಷ್ಟಿಯಿಂದ, ಮತ್ತು ಒಂದು ರಚನಾತ್ಮಕ ದೃಷ್ಟಿಯಿಂದ ಇದನ್ನು ನೋಡುವುದಕ್ಕಿಂತಲೂ – ಒಂದು ಹೆಜ್ಜೆ ಮುಂದೆ ಹೋಗಿ ದೇಶದ ಅಭ್ಯುದಯ ದೃಷ್ಟಿಯಿಂದ ಈಗಿರತಕ್ಕ ವಿದ್ಯಾಭ್ಯಾಸ ಕ್ರಮದಲ್ಲಿ ಏನೇನು ಬದಲಾವಣೆಗಳಾಗಬೇಕೆಂದು ಈ ಸಮಿತಿಯವರ ವರದಿಯಲ್ಲಿ ಶಿಫಾರ್ಸು ಮಾಡಿದ್ದಾರೋ ಅವುಗಳನ್ನೀಗ ವಿಮರ್ಶಿಸಲು ಉದ್ಯುಕ್ತನಾಗುತ್ತೇನೆ.

ಈಗ ನಮ್ಮ ರಾಜ್ಯಾಂಗದಲ್ಲಿ 6 ವರ್ಷಗಳಿಂದ 14 ವರ್ಷಗಳವರೆಗೂ ಎಂದರೆ 8 ವರ್ಷ ಕಾಲ ಮಾಫಿ ಮತ್ತು ಬಲಾತ್ಕಾರ ವಿದ್ಯಾಭ್ಯಾಸವನ್ನು ದೇಶದಲ್ಲಿರತಕ್ಕ ಎಲ್ಲ ಮಕ್ಕಳಿಗೂ ಓದಿಸಬೇಕೆಂದು ಹೇಳಲಾಗಿದೆ. ಈ ವಿಚಾರವನ್ನು ಪ್ರಸ್ತಾಪಮಾಡುವ ಮುನ್ನ ನಾನು ಪ್ರೀ ಪ್ರೈಮರಿ ವಿದ್ಯಾಭ್ಯಾಸದ ವಿಚಾರವಾಗಿ ಎರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ.

ಮೂರು ವರ್ಷದಿಂದ 6 ವರ್ಷ ವಯಸ್ಸಿನಲ್ಲಿರುವ ಮಕ್ಕಳ ನಡೆನುಡಿಗಳನ್ನು ತಿದ್ದಬೇಕು, ಅವರನ್ನು ಚೆನ್ನಾಗಿ ಬೆಳಸಬೇಕು, ಅವರು ಭಾವೀ ಜನಾಂಗ, ಅವರನ್ನು ಹೆಚ್ಚು ಮುತುವರ್ಜಿಯಿಂದ ಸಾಕಬೇಕೆಂಬ ಮಹದಿಚ್ಛೆಯಿದ್ದರೂ ಈಗಿನ ಹಣದ ಅಭಾವದಿಂದ ಕಷ್ಟವಾಗಿದೆ. ಈ ವಿದ್ಯಾಭ್ಯಾಸದ ಖರ್ಚನ್ನು ತಂದೆತಾಯಿಗಳ ಜವಾಬ್ದಾರಿಗೂ ಮೆತ್ತು ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಗೂ ಬಿಡತಕ್ಕದ್ದು ಜಾಣತನವೆಂಬುದಾಗಿ ಈ ಸಮಿತಿಯವರು ಶಿಫಾರ್ಸು ಮಾಡಿದ್ದಾರೆ. ನಾನು ಅವರ ಶಿಫಾರ್ಸನ್ನು ಒಪ್ಪುತ್ತೇನೆ. ಅಂದರೆ ನಾನು ಸರ್ಕಾರದವರು ಈ ಬಗ್ಗೆ ಏನೂ ಮಾಡಕೂಡದೆಂಬ ದೃಷ್ಟಿಯಿಂದ ಹೇಳುತ್ತಿಲ್ಲ. ಆದರೆ ಹೀಗೆ 6 ವರ್ಷಗಳತನಕ ಮಕ್ಕಳ ಬೆಳವಣಿಗೆಯನ್ನು ಅಭಿವೃದ್ಧಿಪಡಿಸಬೇಕೆಂದು ಮೊದಲು ಗಮನಿಸಿದವರು ರಷ್ಯಾ ದೇಶದವರು. ಯಾವ ಯಾವ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಮಾತಾಪಿತೃಗಳಿಗೆ ಸಾಧ್ಯವಿದೆಯೆಂದು ಕಂಡುಬರುತ್ತದೆಯೋ ಅಂಥವರನ್ನು ಒಪ್ಪಿಸಿ, ಇದರ ಭಾರವನ್ನು ಅವರ ಹೊಣೆಗಾರಿಕೆಗೆ ಬಿಡುವುದು ಸೂಕ್ತ ಮತ್ತು ರಾಕಿಕವಾದದ್ದು. ಆದರೆ ಎಲ್ಲೆಲ್ಲಿ ಅಂಥ ಹಣದ ಅಭಾವವಿರುತ್ತದೆಯೋ ಅಂಥ ಸಂದರ್ಭಗಳಲ್ಲಿ, ಸರ್ಕಾರಕ್ಕೆ ದ್ರವ್ಯ ಸೌಕರ್ಯದ ಅನುಕೂಲತೆಗಳಿದ್ದರೆ ಈ ನರ್ಸರಿ ಸ್ಕೂಲುಗಳನ್ನು ಜಾರಿಗೆ ತಂದು ಆ ಮಕ್ಕಳನ್ನು ತಿದ್ದತಕ್ಕದ್ದು ಸೂಕ್ತ. ಪ್ರಾಥಮಿಕ ವಿದ್ಯಾಭ್ಯಾಸ ಈ ಆರು ವರ್ಷಗಳನಂತರ ಪ್ರಾರಂಭವಾಗುತ್ತದೆ. ಪ್ರಪ್ರಥಮವಾಗಿ ಈ ಪ್ರಾಥಮಿಕ ಶಾಲೆಗೆ ಕಾಲಿಡತಕ್ಕ ಹುಡುಗರಿಗೂ ಮತ್ತು ನರ್ಸರಿ ಸ್ಕೂಲಿಂದ ಈ ಪ್ರಾಥಮಿಕ ಶಾಲೆಗೆ ಬರತಕ್ಕ ಹುಡುಗರಿಗೂ ಬಹಳ ವ್ಯತ್ಯಾಸವಿದೆ. ಈ ನರ್ಸರಿ ಸ್ಕೂಲಿನಿಂದ ಬರತಕ್ಕವರು ಒಂದು ಹೆಜ್ಜೆ ಮುಂದಿಟ್ಟಿರುತ್ತಾರೆಂಬುದರಲ್ಲಿ ಯಾರೂ ಭಿನ್ನಾಭಿಪ್ರಾಯವಿರಲಾರದು. ಆದರೆ ನಮಗೆ ವಿಧಿಯಿಲ್ಲದೆ ಇರುವ ಕಷ್ಟದಲ್ಲಿ ತೀರಾ ಹಿಂದುಳಿದಿರುವ ದೇಶವನ್ನು ಕಟ್ಟುವ ಮಹಾ ಪ್ರಯತ್ನದಲ್ಲಿ ಈ ವಿದ್ಯಾಭ್ಯಾಸದ ಸುಧಾರಣೆಯೂ ಒಂದು.

ಆದುದರಿಂದ ಇಂಥ ಒಂದು ಸುಧಾರಣೆಯನ್ನು ಜಾರಿಗೆ ತರಲು ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅದೆಲ್ಲವನ್ನೂ ಮಾಡಬೇಕಾಗಿದೆ. ಈ ದೃಷ್ಟಿಯಿಂದ ಇದು ಎಷ್ಟೇ ಕಷ್ಟವಾಗಿದ್ದರೂ, ಮತ್ತು ಇದು ಎಷ್ಟೇ ಅಗತ್ಯವಾಗಿದ್ದರೂ ಇದನ್ನು ಸರ್ಕಾರದವರು ವಹಿಸುವುದಕ್ಕೆ ಬಹಳ ಕಷ್ಟಗಳಿವೆ. ಆದುದರಿಂದ ಸರ್ಕಾರದವರು ಇವನ್ನು ತಾತ್ಕಾಲಿಕವಾಗಿ ಸಹಕಾರ ನೀಡುವಂಥ ಸಾರ್ವಜನಿಕರ ಆದಳಿತಕ್ಕೆ ಬಿಡತಕ್ಕದ್ದೇ ಒಳ್ಳೆಯದೆಂದು ಹೇಳಿ ಇದನ್ನು ಅಷ್ಟಕ್ಕೇ ಬಿಡುತ್ತೇನೆ. ಸರ್ಕಾರದವರೂ ಇದನ್ನೇ ಹೇಳಿದ್ದಾರೆ.

ಇನ್ನು ಪ್ರಾಥಮಿಕ ವಿದ್ಯಾಭ್ಯಾಸವನ್ನು 4 ವರ್ಷಗಳಿಂದ 6 ವರ್ಷಗಳಿಗೆ ಬದಲಾಯಿಸಬೇಕೆಂದು ಹೇಳಿರುವುದಕ್ಕೆ ಪ್ರಾಯಶಃ ಒಂದೇ ಒಂದು ಪ್ರಬಲವಾದ ಕಾರಣವನ್ನು ಸೂಚಿಸಿದ್ದಾರೆ. ಈಗ ಪ್ರಾಥಮಿಕ ವಿದ್ಯಾಭ್ಯಾಸ 4 ವರ್ಷಗಳವರೆಗೆ ಇದೆ. ಹಳ್ಳಿಗಳಲ್ಲರತಕ್ಕ ಹುಡುಗರು 1, 2, 3 ಮತ್ತು 4 ನೆಯ ವರ್ಷದವರೆಗೂ ಇಲ್ಲಿ ಓದಿ, ಈ ನಾಲ್ಕು ವರ್ಷಗಳಾದನಂತರ ಶಾಲೆಯನ್ನು ಬಿಟ್ಟುಬಿಟ್ಟರೆ ಅವರು ಕಲಿತ ವಿದ್ಯಾಭ್ಯಾಸವನ್ನು ಮರೆತುಬಿಡುತ್ತಾರೆ. ಇದರಿಂದ ನಷ್ಟವೂ ವೇಸ್ಟೇಜೂ ಜಾಸ್ತಿಯಾಗುತ್ತದೆಂಬ ಒಂದು ಕಾರಣವನ್ನು ಮುಂದಿಟ್ಟು ಈ ಅವಧಿಯನ್ನು 6 ವರ್ಷಗಳವರೆಗಾದರೂ ಹೆಚ್ಚಿಸಿದರೆ ಆಗ ಅವರು ವಿದ್ಯಾಭ್ಯಾಸ ಮಾಡಿದ ಕನ್ನಡವನ್ನಾದರೂ ಮರೆಯದೆ ಇರುವಂತೆ ಚೆನ್ನಾಗಿ ಕಲಿತುಕೊಳ್ಳುತ್ತಾರೆಂಬ ಒಂದು ಉದ್ದೇಶದಿಂದ ಇದನ್ನು ಮಾಡಿದ್ದಾರೆಂದು ಕಂಡುಬರುತ್ತದೆ.

ಆದರೆ ಈಗ ಮೈಸೂರಿನಲ್ಲಿ 4 ವರ್ಷ ಪ್ರೈಮರಿ 4 ವರ್ಷ ಮಾಧ್ಯಮಿಕ ಶಿಕ್ಷಣ, ಹೀಗೆ 8 ವರ್ಷಗಳ ವಿದ್ಯಾಭ್ಯಾಸಕ್ರಮ ನಡೆದುಕೊಂಡುಬರುತ್ತಿದೆ. ಪ್ರಾಥಮಿಕ ಶಿಕ್ಷಣಕ್ಕೆ ಯಾವ ಶುಲ್ಕವೂ ಇಲ್ಲ. ಆದರೆ ಮಾಧ್ಯಮಿಕ ಶಾಲೆಗಳಿಗೆ ಕೆಲವು ಕಾಲ ಅಂದರೆ ಎರಡು ವರ್ಷಗಳವರೆಗೋ ಏನೋ ಶುಲ್ಕವಿತ್ತು. ಆದರೆ ಪ್ರಜಾಪ್ರತಿನಿಧಿಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರುಗಳು ಬಹಳ ಹಿಂದುಳಿದಿರತಕ್ಕಂಥ ಗ್ರಾಮಾಂತರ ಪ್ರದೇಶಗಳ ಜನರ ಪರವಾಗಿ ವಿಪರೀತವಾಗಿ ಆಗಿದ್ದ ಸರ್ಕಾರದವರ ಮುಂದೆ ಬೇಡಿಕೆಗಳನ್ನಿಟ್ಟಿದ್ದರಿಂದ, ಆಗಿನ ಸರ್ಕಾರ ಅವರ ಮೊರೆಯನ್ನು ಕೇಳಿ ಆ ಫೀಜನ್ನು ಕಿತ್ತುಹಾಕಿದರು. ಈಗಿರತಕ್ಕ ರಾಜ್ಯಾಂಗದಲ್ಲಿ ಕೂಡ ಇದನ್ನೇ ಅಡಕ ಮಾಡಿ 8 ವರ್ಷಗಳತನಕ ಯಾವ ವಿಧವಾದ ಶುಲ್ಕವನ್ನೂ ವಿಧಿಸದೆ ದೇಶದಲ್ಲಿರತಕ್ಕ ಮಕ್ಕಳಿಗೆಲ್ಲಾ ವಿದ್ಯಾಭ್ಯಾಸದ ಸೌಕರ್ಯಗಳನ್ನೊದಗಿಸಬೇಕೆಂದು ತಿಳಿಸಿದ್ದಾರೆ. ಆದರೆ ಮೈಸೂರು ದೇಶದಲ್ಲಿ ಅಂಥ ಯಾವ ಒಂದು ನಿರ್ಬಂಧವಿಲ್ಲದೆ ಇದ್ದಾಗ್ಯೂ ಸಹಸ್ರಾರು ಜನರು ಇದರ ಪ್ರಯೋಜನವನ್ನು ಇಂದು ಅನುಭವಿಸುತ್ತಿದ್ದಾರೆ. ಈ ಅಂಶವನ್ನೇ ಅಂದರೆ, ಶುಲ್ಕವಿಲ್ಲದೆ 8 ವರ್ಷಗಳ ಕಾಲ ವಿದ್ಯಾಭ್ಯಾಸವನ್ನು ಒದಗಿಸಬೇಕು ಎಂಬ ವಿಧಿಯು ಈಗ ರಾಜ್ಯಾಂಗದಲ್ಲಿ ನಿರೂಪಿತವಾಗಿದೆ. ಹೀಗೆ ಯಾವುದು ಕಡ್ಡಾಯವಾಗಿ ಆಗಬೇಕೋ ಅದನ್ನು all States shall endeavour ಎಂಬುದಾಗಿ ಹೇಳಿ ಸಂಸ್ಥಾನಗಳೆಲ್ಲಾ ಇದನ್ನು ಕಡ್ಡಾಯವಾಗಿ ಮಾಡಲೇಬೇಕೆಂದು ನಿಯಮಿತವಾಗಿದೆ. ಈ ವಿಷಯವನ್ನು ನಾವು ಇದನ್ನು ತಪ್ಪಿಸಬೇಕೆಂದು ಹೇಳುವುದು ನನಗೆ ಅಷ್ಟು ರುಚಿಸುವುದಿಲ್ಲ. ಈ ಸಮಿತಿಯವರು ಈ ತಂಟೆಗೇ ಹೋಗದಿದ್ದರೆ ಬಹಳ ಚೆನ್ನಾಗಿತ್ತು. ಆದರೆ ಇವರು ಇನ್ನೂ ಒಂದು ವಿಷಯ ಹೇಳಿದ್ದಾರೆ. "ಹಣ ದೊರೆತಹಾಗೆಲ್ಲಾ ಈ ವಿದ್ಯಾಭ್ಯಾಸದ ಅವಧಿಯನ್ನು 6 ವರ್ಷಗಳಿಂದ 7 ವರ್ಷಕ್ಕೆ ಅನಂತರ 8ವರ್ಷಕ್ಕೆ ಏರಿಸುತ್ತೇವೆ" ಎಂದು. ಕೆಲವು ಕಾಲ 6 ವರ್ಷ, ಕೆಲವು ಕಾಲ 7 ವರ್ಷ ಹೀಗೆ ಮಾಡಬೇಕೆಂದು ಹೇಳಿರತಕ್ಕದ್ದು ಅಷ್ಟು ಒಳ್ಳೆಯಮಾರ್ಗವಲ್ಲ ಮತ್ತು ಇದು ಸರಿಯಾದ್ದೂ ಅಲ್ಲ. ಈ ವಿದ್ಯಾಭ್ಯಾಸ ನುಧರಣೆಗಳು ಸಾರ್ವತ್ರಿಕವಾಗಿ ಎಲ್ಲಾ ಕಡೆಯಲ್ಲೂ ಒಂದೇ ರೀತಿಯಾಗಿರುವಂತೆ ಎಂದರೆ ಪ್ಯಾಟರ್ನ್ ! ಹೊಂದಿಕೊಳ್ಳುವಂತಿರಬೇಕು. ಈಗ ಮದ್ರಾಸಿನಲ್ಲಿ ಈ ಪ್ರೈಮರಿ ವಿದ್ಯಾಭ್ಯಾಸದ ಅವಧಿ 8 ವರ್ಷಗಳಿರುತ್ತದೆ. ಅಮೇರಿಕಾ ದೇಶದಲ್ಲೂ 8 ವರ್ಷಗಳೆಂದಿದೆ. ನಮ್ಮಲ್ಲಿಯೂ ಇಲ್ಲಿಯತನಕ ಆದೇ 8 ವರ್ಷಗಳಂತೆ ನಡೆದುಕೊಂಡು ಬರುತ್ತಿತ್ತು. ಈ 8 ವರ್ಷಗಳ ವಿದ್ಯಾಭ್ಯಾಸವನ್ನು ಒಂದೊಂದು ಕಡೆ ಒಂದೊಂದು ರೀತಿಯಾಗಿ ಅವರು ಕರೆಯಬಹುದು. ನಮ್ಮಲ್ಲಿ ಈ 8 ವರ್ಷಗಳ ವಿದ್ಯಾಭ್ಯಾಸವನ್ನು ನಾವು ಪ್ರೈಮರಿ ಮತ್ತು ಮಿಡರ್ ಎಂದು ಕರೆಯುತ್ತಿದ್ದೇವೆ. ತಮಗೆ ಈ ಮಿಡರ್ ಎಂಬ ಶಬ್ದವನ್ನು ಕರೆಯಲು ಇಷ್ಟವಿಲ್ಲದಿದ್ದರೆ ಜೂನಿಯರ್ ಪ್ರೈಮರಿ ಮತ್ತು ಸೀನಿಯರ್ ಪ್ರೈಮರಿ ಎಂಬುದಾಗಿ ಕರೆಯೋಣ. ಈ ಎರಡು ದೃಷ್ಟಿಯಿಂದಲೂ 4 ವರ್ಷ ಪ್ರೈಮರಿ 4 ವರ್ಷ ಮಿಡಲ್ ಹೀಗಿರತಕ್ಕ ಪ್ಯಾಟರ್ನ್ ಬದಲಾವಣೆ ಆಗಬಾರದು. ಆದರೆ ಅದರ ಕಂಟೆಂಟ್ಸ್ ಬದಲಾವಣೆಯಾಗಬೇಕು. ಇದರಲ್ಲಿ ಯಾರದೂ ಭಿನ್ನಾಭಿಪ್ರಾಯವಿರಲಾರದು. ಇದನ್ನು ಸಮಿತಿಯವರೂ ಒಪ್ಪಿಕೊಂಡಿದ್ದಾರೆ-" ಈಗ ಇರುವ ಪ್ರೈಮರಿ ವಿದ್ಯಾಭ್ಯಾಸದಲ್ಲಿ ಏನೂ ತಿರುಳಿಲ್ಲ" ಎಂದು. ಪದೇ ಪದೇ ಅನೇಕ ಸೂಚನೆಗಳು ಬಂದಾಗ್ಯೂ ಇದು ಮಾತ್ರ ಮಾರ್ಪಾಟಾಗಲೇ ಇಲ್ಲ. ಆದಷ್ಟೂ ಚಿಕ್ಕ ವಯಸ್ಸಿನಲ್ಲೇ ಮಕ್ಕಳಿಗೆ ಒಳ್ಳೆಯ ವಿದ್ಯೆಯನ್ನು ಬೋಧಿಸಬೇಕೆಂದು ಹೇಳಿರುವುದೇನೋ ಒಳ್ಳೆಯದೆ ಅದನ್ನು ಒಪ್ಪೋಣ. ಆದರೆ ಇದನ್ನು ಕಾರ್ಯತಃ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಯೋಚಿಸಿ ಹೇಳುವುದಾದರೆ ಈ ಅವಧಿಯನ್ನು 6 ವರ್ಷಗಳಿಗೆ ಮೊಟಕು ಮಾಡುವುದು ಅಷ್ಟು ಸಾಧುವಾದದ್ದಲ್ಲ ವೆಂದು ಸೂಚಿಸಬೇಕಾಗಿದೆ. ಈಗ ಅನೇಕ ಹಳ್ಳಿಗಳಲ್ಲಿ ಒಂದೇ ರೂಮು ಒಬ್ಬರೇ ಟೀಚರ್ ಇರತಕ್ಕಂಥ ಶಾಲೆಗಳು ಎಷ್ಟೋ ಇವೆ. ಸಂಸ್ಥಾನದಲ್ಲಿರುವ 10,475 ಪ್ರೈಮರಿ ಪಾಠಶಾಲೆಗಳಲ್ಲಿ singlet-eacher schools ನಮ್ಮಲ್ಲಿ ,400 ಇವೆ. ಈ ಒಬ್ಬರು ಉಪಾಧ್ಯಾಯರು ಇರುವ ಸ್ಕೂಲುಗಳಲ್ಲಿ ಜೊತೆಗೆ ಇನ್ನೊಬ್ಬರನ್ನಾದರೂ ಕೊಟ್ಟರೆ ನಾಲ್ಕುವರ್ಷ ಪಾಠಪ್ರವಚನಗಳನ್ನು ಸರಿಯಾಗಿ ನಡೆಸಬಹುದೆಂದಿದೆ. ಆ ಪ್ರಕಾರ ಇನ್ನೊಬ್ಬರು ಉಪಾಧ್ಯಾಯರನ್ನು ಕೊಡಬೇಕೆಂದರೂ 5,400 ಉಪಾಧ್ಯಾಯರುಗಳು ಬೇಕಾಗುತ್ತಾರೆ. ಜೊತೆಗೆ 300 ಜನಕ್ಕಿಂತ ಕಮ್ಮಿಯಿರತಕ್ಕ ಅನೇಕ ಗ್ರಾಮಗಳಲ್ಲಿ ಸ್ಕೂಲುಗಳಿಲ್ಲ. ಸಮಿತಿಯವರು ಹೇಳಿದ್ದಾರೆ, ನಮಗೆ 5,000 ಸ್ಕೂಲುಗಳು ಬೇಕು, ವರ್ಷಕ್ಕೆ 500ರಂತೆ ಸ್ಕೂಲುಗಳನ್ನು ಕೊಡುತ್ತಾ ಬರಬೇಕು ಎಂದು. ಇಷ್ಟು ಮಾಡಬೇಕಾದರೂ 10 ವರ್ಷಗಳು ಬೇಕು. ಆದರೆ ಈಗ ಎಲ್ಲಿ ಒಬ್ಬರೇ ಉಪಾಧ್ಯಾಯರಿದ್ದಾರೋ ಅಲ್ಲಿಗೆ ಇನ್ನೊಬ್ಬರು ಉಪಾಧ್ಯಾಯರನ್ನು ಕೊಟ್ಟರೇ ಸಾಕೆಂದು ಕೇಳುತ್ತಿದ್ದರೂ ಅದನ್ನೇ ಕೊಡುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ ಆದ್ದರಿಂದ ಈ ಪ್ರೈಮರಿಸ್ಕೂಲನ್ನು ಒಂದು ವೇಳೆ ಐದು ವರ್ಷವೆಂದು ಮಾಡಿದರೂ ಅಷ್ಟಾಗಿ ಭಿನ್ನಾಭಿಪ್ರಾಯ ಬರಲಾರದು. ಮಿಡ್ಲ್ ಸ್ಕೂಲನ್ನು ಮೂರು ವರ್ಷವೆಂದು ಮಾಡಿ ಪ್ರೈಮರಿ ಸ್ಕೂಲನ್ನು ಐದು ವರ್ಷ ಮಾಡಿದರೂ ಪರವಾಯಿಲ್ಲ. ಆದರೆ ಮುಖ್ಯವಾಗಿ ಅನೇಕ ವರ್ಷಗಳಿಂದ ಬಂದಿರತಕ್ಕ ಈಗಿನ pattern ಬದಲಾವಣೆ ಮಾಡಿದರೆ ಅಷ್ಟು ಪ್ರಯೋಜನವಾಗಲಾರದು. ಅಲ್ಲದೆ ಹಾಗೆ ಬದಲಾವಣೆಮಾಡುವುದಕ್ಕೆ ಪ್ರಬಲವಾದ ಕಾರಣಗಳೂ ಇಲ್ಲ. ಒಂದೇ ಒಂದು ದೃಷ್ಟಿಯಿಂದ ಹೇಳಿದ್ದಾರೆ. ಆರು ವರ್ಷ ಈ ರೀತಿ ವಿದ್ಯಾಭ್ಯಾಸಕೊಟ್ಟರೆ ಆ ವಿದ್ಯಾರ್ಥಿ ಪುನಃ ಅನಕ್ಷರಸ್ಥನಾಗುವುದಿಲ್ಲವೆಂಬ ಒಂದು ಕಾರಣ ಕೊಡುತ್ತಾರೆ ಅಷ್ಟೆ. ಇದಕ್ಕೆ ನನ್ನ ಉತ್ತರ ಇಷ್ಟೆ: ಸರಿಯಾದ ಉಪಾಧ್ಯಾಯರನ್ನಿಟ್ಟು ಪಾಠ ಹೇಳಿಕೊಟ್ಟರೆ, ಒಳ್ಳೆಯ ತರಬೇತಾದ ಉಪಾಧ್ಯಾಯರನ್ನಿಟ್ಟರೆ ನಾಲ್ಕು ವರ್ಷ ಓದಿದ ಹುಡುಗರು ಆ ಮೇಲೆ ಸ್ಕೂಲು ಬಿಡುವುದಿಲ್ಲ. ಅಲ್ಲದೆ ಇತ್ತೀಚೆಗೆ ನಾವು ನೋಡಿರುವುದರಲ್ಲಿ, there is a phenomenal increase in the nuu ber of students coming to schools. ಬರತಕ್ಕ ಹುಡುಗರಿಗೆ ಪಾಠಶಾಲೆಗಳನ್ನು ಒದಗಿಸುವುದೇ ಕಷ್ಟವಾಗಿದೆಯೆಂದು ಹೇಳಿದ್ದಾರೆ. ಒಂದೊಂದು ಸ್ಕೂಲಿನಲ್ಲಿ ಜಾಗವಿಲ್ಲದೆ, ಜಗಲಿಗಳ ಮೇಲೆ, ಮರದ ಕೆಳಗೆ ಸ್ಕೂಲುಗಳನ್ನು ಮಾಡುವ ಸ್ಥಿತಿ ಬಂದಿದೆ. ಹಿಂದೆಯಾದರೋ ನರ್ ಕೆ. ಶೇಷಾದ್ರಯ್ಯರ್ ಕಾಲದಲ್ಲಿ ಗ್ರಾಮಾಂತರಗಳಲ್ಲಿ ಸ್ಕೂಲುಗಳನ್ನು ಕೊಟ್ಟರೂ ಹುಡುಗರು ಬರುತ್ತಿರಲಿಲ್ಲ. ನರ್ ಎಂ ವಿಶ್ವೇಶ್ವರಯ್ಯನವರ ಕಾಲದಲ್ಲೂ ಅನೇಕ ಕಡೆ languishing schools ಎಂದು

(ಶ್ರೀ ಟಿ. ಮರಿಯಪ್ಪ.)

ಹೇಳಿ ಪಾಠಶಾಲೆಗಳನ್ನು ತೆಗೆಯುತ್ತಿದ್ದರು. ಈಗ ಆ ಪರಿಸ್ಥಿತಿ ಇಲ್ಲ. ಈಗ ಎಲ್ಲಾ ಕಡೆಯಲ್ಲೂ ಸ್ಕೂಲು ಗಳನ್ನು ಕೊಡಿ, ಕೊಡಿ ಎಂದು ಕೇಳುತ್ತಿದ್ದಾರೆ. ಆದ್ದರಿಂದ ಈಗ ಎಲ್ಲೆಲ್ಲಿ ಸ್ಕೂಲು ಬೇಕೆಂದು ಒತ್ತಾಯ ಮಾಡುತ್ತಿದ್ದಾರೋ ಅಲ್ಲಿಗೆಲ್ಲಾ ಕೊಡಬೇಕಾದರೆ ಎಷ್ಟು ಹಚ್ಚಿಗೆ ಮಾಡಬೇಕೆಂಬದನ್ನು ನೋಡಿಕೊಂಡು ವರ್ಷಕ್ಕೆ 500ರಂತೆ ಸ್ಕೂಲುಗಳನ್ನು ಕೊಡುವುದು ಮತ್ತು ಈ ವಿಚಾರದಲ್ಲಿ ಸಮಿತಿಯವರು ಮಾಡಿರುವ ಶಿಫಾರಸು ಸಾಧುವಾದುದು. ಆದರೆ ಮಾತ್ರ ಮಿಡ್ಲ್ ಸ್ಕೂಲಿನಲ್ಲಿ ಅನೇಕ ವರ್ಷಗಳಿಂದ ನಡೆಯುಕೊಂಡು ಬಂದಿರುವ pattern ಒಡೆಯಬೇಡಿ ಎಂದು ಹೇಳು ತ್ತೇನೆ. ಬೇಕಾದರೆ ಅದನ್ನು ಮಾಧ್ಯಮಿಕ ಶಾಲೆ ಯೆಂದು ಕರೆಯದೇ ಇದ್ದರೂ ಪರವಾಯಿಲ್ಲ. ವಾಸ್ತವ ವಾಗಿ ಮಾಧ್ಯಮಿಕ ಶಾಲೆಗಳಲ್ಲಿ ಒಂದು ಮಹತ್ವವಿದೆ. ನಾಲ್ಕುವರ್ಷ ಹಳ್ಳಿಯಲ್ಲಿ ಓದಿದ ವಿದ್ಯಾರ್ಥಿ ಮಿಡ್ಲ್ ಸ್ಕೂಲಿಗೆ ಹೋಗಿ ಬೇರೆ ಊರಿನ ಹುಡುಗರ ಜೊತೆಯಲ್ಲಿ ಸೇರಿ ಅವರ ಸಂಪರ್ಕ ಹೊಂದುವ ವಿಶೇಷವಾದ ಸೌಲಭ್ಯ ಇಲ್ಲಿ ದೊರೆಯುತ್ತದೆ. ಸಮಿತಿಯವರೂ ಕೂಡ ಇದನ್ನು ಒಪ್ಪಿದ್ದಾರೆ. ಸೆಂಟ್ರಲ್ ಸ್ಕೂಲು ಗಳು ಏಕೆ ಯಶಸ್ವಿಯಾಗಲ್ಲಿಲ್ಲವೆಂದು ಹೇಳಿ ಅವು ಗಳನ್ನು ನಿರಿಮಾಡಬೇಕಾಗಿತ್ತೆಂದು ಹೇಳಿದ್ದಾರೆ. ಸೆಂಟ್ರಲ್ ಸ್ಕೂಲಗಳೆಂದರೂ ಒಂದೇ, ಮಿಡ್ಲ್ ಸ್ಕೂಲುಗಳೆಂದರೂ ಒಂದೇ. ಆದ್ದರಿಂದ ಇವುಗಳನ್ನು ಬದಲಾಯಿಸಬೇಡಿ. ಇನ್ನೂ ಬೇಕಾದರೆ ಹೆಚ್ಚಿಗೆ ಉಪಾಧ್ಯಾಯರುಗಳಿದ್ದರೆ ಪ್ರೈಮರಿ ಸ್ಕೂಲುಗಳನ್ನು ಐದು ವರ್ಷವೆಂತಲೂ ಮಿಡ್ಲ್‌ಸ್ಕೂಲನ್ನು ಮೂರು ವರ್ಷವೆಂತಲೂ ಮಾಡಿ. ಮುಖ್ಯವಾಗಿ ಅಕ್ಕಪಕ್ಕದ ವಿದ್ಯಾರ್ಥಿಗಳು ಒಂದು ಕಡೆ ಸೇರುವುದಕ್ಕೆ ಇಂಥ ಒಂದು ಅನುಕೂಲವಿರುವುದು ಬಹಳ ಅವಶ್ಯಕ. ಒಬ್ಬರಿಗೊಬ್ಬರು ಮಿಳಿತವಾಗಿ inferiority complex ಕಳೆದುಕೊಳ್ಳುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಾನು ಸರ್ಕಾರದವರಿಗೆ ಒಂದು ಸೂಚನೆ ಕೊಡಬಯಸುತ್ತೇನೆ. ಸರ್ಕಾರದವರು ವಾಪಸ್ಸುಮಾಡಿ ಪ್ರತಿ ಯೊಂದು ಮಾಧ್ಯಮಿಕ ಶಾಲೆಯ ಪಕ್ಕದಲ್ಲೂ ಒಂದು ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು ಸ್ಥಾಪನೆ ಮಾಡಿ ಎಲ್ಲಾ ಕೋಮಿನ ವಿದ್ಯಾರ್ಥಿಗಳಿಗೂ ಅಲ್ಲಿ ಅವಕಾಶ ಕೊಟ್ಟು ಯಾರಿಗೆ ಹಣ ಕೊಡುವುದಕ್ಕೆ ಶಕ್ತ ಯಿಲ್ಲವೋ ಅವರಿಗೆ ಧರ್ಮಾರ್ಥವಾಗಿ ಊಟ ಹಾಕುವು ದಕ್ಕೆ ಏರ್ಪಡಿಸಿ, ಶಕ್ತಿಯಿರುವವರಿಂದ ಅವರ ಶಕ್ತ್ಯಾ ನುಸಾರ ಹಣವನ್ನು ತೆಗೆದುಕೊಂಡು ವಿದ್ಯಾರ್ಥಿಗಳು ವಿದ್ಯಾನಿಲಯದಲ್ಲಿದ್ದುಕೊಂಡು ವ್ಯಾಸಂಗಮಾಡುವ ವಿಧಾನವನ್ನು ಕೈಕೊಂಡರೆ ದೇಶಕ್ಕೆ ಬಹಳ ಒಳ್ಳೆಯ ದಾಗುತ್ತದೆಂದು ನನಗೆ ಮನವರಿಕೆಯಾಗಿದೆ. ಇದಕ್ಕೆ ಹಿನ್ನೆರೆ ಇಷ್ಟೆ. ನಮ್ಮ ದೇಶಕ್ಕೆ ಹಿಂದುಳಿದ ಪಂಗಡ ಗಳ ಉದ್ಧಾರಕ್ಕಾಗಿ ಬಂದ ಸಮಿತಿಯವರು, ತಾವು ಎಲ್ಲಾ ಕಡೆಯೂ ಸುತ್ತಿ, ನೋಡಿದ್ದರಲ್ಲಿ ಮೈಸೂರು ದೇಶದ ಮಿಡ್ಲ್‌ಸ್ಕೂಲಿನ pattern ಬಹಳಮಟ್ಟಿಗೆ ಹಿಡಿಯಿತು ಎಂದು ಹೇಳಿದ್ದಾರೆ. ಆದರೆ, ಪ್ರತಿ ಯೊಂದು ಊರಿನಲ್ಲಿಯೂ ವಿದ್ಯಾರ್ಥಿನಿಲಯಗಳನ್ನು ಮಾಡುವುದು ಬಹಳ ಕಷ್ಟ. ಹಳ್ಳಿಗಳಲ್ಲಿರತಕ್ಕ ಸ್ಕೂಲು ಗಳ ವಿಷಯದಲ್ಲಿ ವಿದ್ಯಾರ್ಥಿನಿಲಯಗಳು ಅನಾವಶ್ಯಕ. ಆದ್ದರಿಂದ ಸೆಂಟ್ರಲ್ ಸ್ಕೂಲ್‌ಗಳಿರುವ ಕಡೆಗಳಲ್ಲಿ ವಿದ್ಯಾರ್ಥಿನಿಲಯಗಳನ್ನೇರ್ಪಡಿಸಿ ಅಲ್ಲಿ ಎಲ್ಲಾ ಕೋಮಿ ನವರ ವಿದ್ಯಾರ್ಥಿಗಳೂ ಸೇರಿ ಮೇಲು ಕೀಳು ಎಂಬ ಭಾವನೆ ಹೋಗಿ ಸಹೋದರಭಾವ ಬೆಳೆದರೆ ಅವರು ಸತ್ಪ್ರಜೆಗಳಾಗುತ್ತಾರೆ. ನಾವು casteless society ಮಾಡಬೇಕೆಂದು ಏನು ಒಂದು ಉದ್ದೇಶವನ್ನು ಇಟ್ಟು ಕೊಂಡಿದ್ದೇವೋ ಅದಕ್ಕೆ ಇದು ಮೊದಲನೆಯ ತಳಹದಿ ಹಾಕಿದಂತಾಗುತ್ತದೆ. ಆದ್ದರಿಂದ ಇದನ್ನು ತೀವ್ರವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಮಾಧ್ಯಮಿಕ ಮತ್ತು ಪ್ರೈಮರಿ ವಿದ್ಯಾಭ್ಯಾಸದ ಕೋರ್ಸನ್ನು ಎಂಟು ವರ್ಷ ಇಟ್ಟು ಕೊಳ್ಳುವುದರಿಂದ ಇನ್ನೊಂದು ಗುಣವಿದೆ. ಈ ಎಂಟು ವರ್ಷಕ್ಕೆ ನರಿಯಾದ ಶಿಕ್ಷಣ ದೊರೆಯುತ್ತದೆ. ಅಲ್ಲದೆ ಈಗ ಸಮಿತಿಯವರು ಹೇಳಿರುವ ಪ್ರಕಾರ ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಏನೇನು ದೋಷಗಳಿವೆಯೊ ಅವುಗಳಲ್ಲಿ ಬಹುಭಾಗ ನಾವು ತರಪೇತು ಮಾಡದಿರುವ ಉಪಾಧ್ಯಾಯರುಗಳಿಂದಲೇ ಬಂದಿದೆಯೆಂದು ಗೊತ್ತಾಗಿದೆ ನಮ್ಮಲ್ಲಿರುವ 21,299 ಉಪಾಧ್ಯಾಯರುಗಳ ಪೈಕಿ 6,124 ಉಪಾಧ್ಯಾಯರುಗಳು ಮಾತ್ರ ತರ ಪೇತಾಗಿರುವವರು. ಆದ್ದರಿಂದ ಬಹಳ ಅಗಾಧವಾದ ಸಂಖ್ಯೆಯಲ್ಲಿ ನಾವೀಗ ಉಪಾಧ್ಯಾಯರುಗಳನ್ನು ತರಪೇತು ಮಾಡಬೇಕಾಗಿದೆ. ಸಮಿತಿಯವರು ಒಟ್ಟು ಲೆಕ್ಕಹಾಕಿ ಸುಮಾರು 99,000 ಉಪಾಧ್ಯಾಯರು ಗಳನ್ನು ತರಪೇತು ಮಾಡಬೇಕೆಂದು ಹೇಳಿದ್ದಾರೆ. ಇಷ್ಟನ್ನು ಮಾಡುವುದಿರಲಿ, ಸದ್ಯಕ್ಕೆ ಇರುವ ಉಪಾ ಧ್ಯಾಯರಗಳಲ್ಲೇ ಬಹುಭಾಗದಷ್ಟು ತರಪೇತಾಗಿಲ್ಲ. ಆದ್ದರಿಂದ ನಮ್ಮ ಶಿಕ್ಷಣ ಸಂಪೂರ್ಣವಾಗಬೇಕಾದರೆ ಬಹುಸಂಖ್ಯೆಯಲ್ಲಿ ಉಪಾಧ್ಯಾಯರುಗಳನ್ನು ತರಪೇತು ಮಾಡಬೇಕಾಗಿದೆ. ಆದ್ದರಿಂದ ಹೆಚ್ಚು ಗಮನವನ್ನು ಸರ್ಕಾರದವರು ಇದಕ್ಕೆ ಕೊಡಬೇಕು. ಇದೇ ಮೊದ ಲನೆಯ ಹೆಜ್ಜೆ. ನಮ್ಮ ದೇಶದಲ್ಲಿ ಹೊಸ ಸುಧಾರಣೆಗೆ ಪ್ರಥಮ ಸ್ಥಾನ ಬೇಕೆಂದಿರುವುದರಿಂದ ಈ ವಿಷಯ ಗಳಿಗೆ ತಾವು ಹೆಚ್ಚು ಗಮನ ಕೊಡಬೇಕೆಂದು ಹೇಳು ತ್ತೇನೆ. ಏನೆಂದರೆ, ಉಪಾಧ್ಯಾಯರುಗಳನ್ನು ಅದಷ್ಟು ಜಾಗ್ರತೆ ತರಪೇತು ಮಾಡಬೇಕು, ಒಬ್ಬೊಬ್ಬರು ಉಪಾಧ್ಯಾಯರುಗಳಿರುವ ಕಡೆ ಇಬ್ಬರು ಉಪಾಧ್ಯಾ ಯರನ್ನು ಕೊಡಬೇಕು, ಮಾಧ್ಯಮಿಕ ಶಾಲೆ ಇರುವಕಡೆ ಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಏರ್ಪಡಿಸಿ ವಿದ್ಯಾರ್ಥಿ ಗಳನ್ನು ಮೊದಲನಿಂದಲೇ ತಿದ್ದುವುದಕ್ಕೆ ಅವಕಾಶ ಮಾಡಬೇಕು. ಇದರಿಂದ ಹುಡುಗರಲ್ಲಿ ಈಗಿರತಕ್ಕ ಅಶಿಸ್ತು, waywardness, indecisions ಮುಂತಾದ ಅನೇಕ ದೋಷದೋಷಗಳು ಹೋಗುತ್ತವೆ. ಬೇಕಾದರೆ ಇದೇ ವಿದ್ಯಾರ್ಥಿಗಳಿಗೆ ಒಂದು ನೀತಿ ಪ್ರದ ಧಾದ ಬೋಧನೆಯ ಪ್ರಯೋಗ ನಡೆಯಲಿ. ಅಲ್ಲಿ ನಾವು ಹಿಂದೆ ಓದುವ ಕಾಲದಲ್ಲಿ ಪ್ರತಿದಿನವೂ ಹತ್ತು ನಿಮಿಷವಾದರೂ prayer ಮಾಡುತ್ತಿದ್ದೆವು. ಯಾವ ಮತಕ್ಕೂ ತೊಂದರೆಯಾಗದಿರುವರೀತಿಯಲ್ಲಿ ನಾವೂ ಇಲ್ಲಿ ಪ್ರಾರ್ಥ ನೆಯನ್ನು ಮಾಡಬಹುದು. ನಮ್ಮ ದೇಶಕ್ಕೆ ಅನ್ವಯಿಸು ವಂತೆ ಪ್ರಾರ್ಥನೆಮಾಡುವಂತೆ ಹೇಳಬಹುದು. ನಾನು ಸಿರಿಗೆರೆಗೆ ಹೋದಾಗ ಅಲ್ಲಿನ ಸ್ವಾಮಿಗಳು ಹೇಳಿದರು, ತಮ್ಮ ವಿದ್ಯಾರ್ಥಿನಿಲಯದಲ್ಲಿ ಎಲ್ಲಾ ಕೋಮಿನ ವರಿಗೂ ಒಬ್ಬರಿಗೊಬ್ಬರಿಗೆ ಭಿನ್ನತೆಯಿಲ್ಲದಿರಲೆಂಬ ಉದ್ದೇಶದಿಂದ ನಮ್ಮ ಮಾತೃಭೂಮಿಯನ್ನು ಕುರಿತು ಪ್ರಾರ್ಥನೆಮಾಡುವಂತೆ ಮಾಡಿದ್ದೇವೆಂದು ಹೇಳಿದರು.

5 P.M.

ಆದುದರಿಂದ, ಹೀಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವ ಅವಧಿ ಎಂಟು ವರ್ಷವಾದರೆ, ಆಗ ಇಲ್ಲಿ

ಏನು ಒಂದು ಟೆಕ್ನಿಕಲ್ ವಿದ್ಯಾಭ್ಯಾಸ ಮಾಡಲು ಶಿಫಾರಸು ಮಾಡಿದ್ದಾರೋ ಅದಕ್ಕೆ ಈ ವಿದ್ಯಾರ್ಥಿಗಳಿಗೆ ಅರ್ಹತೆ ಬರುತ್ತದೆ. ಮಿಡ್ಲ್ ಸ್ಕೂಲು ಕೋರ್ಸಾದ ಮೇಲೆ ಪಬ್ಲಿಕ್ ಪರೀಕ್ಷೆಯನ್ನಾದರೂ ಇಡಿ ಅಥವಾ ಟೆಸ್ಟ್ ಆದರೂ ಇಡಿ. ಆದರೆ ಯಾವ ಪರೀಕ್ಷೆಯೂ ಬೇಡವೆಂದು ವಜಾಮಾಡಬೇಡಿ. ಏನಾದರೂ ಒಂದು ರೀತಿಯಲ್ಲಿ ಟೆಸ್ಟ್ ಇರಲೇಬೇಕು. ಇದು ಎಲ್ಲ ದೇಶಗಳಲ್ಲಿಯೂ ಇದೆ. ಏಕೆಂದರೆ, ಇದರಿಂದ ಜಳ್ಳಾವುದು ಗಟ್ಟಿಯಾವುದು, ಎಂಬುದು ಗೊತ್ತಾಗುತ್ತದೆ. ಪ್ರಾಯಶಃ ಜಳ್ಳಾಗಿರುವುದರಿಂದ ತೂರುವುದು ಅವಶ್ಯಕ. ಇದು ನಮ್ಮ ಜೀವನದಲ್ಲಿಯೂ ನಡೆಯುತ್ತಿದೆ. Survival of the fittest ಎಂದು ಹೇಳುವ ಹಾಗೆ ಗಟ್ಟಿಯಾಗಿರುವುದು ಉಳಿಯುತ್ತದೆ, ಆದುದರಿಂದ ಅದಷ್ಟು ಆಲೋಚನೆ ಮಾಡಿ, ಮಿಡ್ಲ್ ಸ್ಕೂಲು ಪರೀಕ್ಷೆಯನ್ನು ಇಟ್ಟುಕೊಳ್ಳುವಂತೆ ಮಾಡಿ.

Mr. SPEAKER.—I feel that a time limit is necessary. Tomorrow we will fix up that limit. May I know how much more time you require?

Sri T. MARIAPPA.—I require about half an hour more.

Sri K. PATTABHIRAMAN (Kolar).—With your permission, I wish to say, Sir, that the subject matter we are dealing with is a very important one. I would therefore request the Speaker not to fix any time limit.

Sri T. MARIAPPA.—We will be grateful to you if no time limit is fixed, because, there are so many problems to be covered under this vast subject.

Sri K. PATTABHIRAMAN.—I am glad that Sri Mariappa agrees with me and I am again requesting you, Mr. Speaker, not to fix any time limit for discussion of this subject.

(The whole House was in agreement with the views of Sri K. Pattabhiraman.)

Mr. SPEAKER.—What does the Leader of the House say?

Sri K. HANUMANTHAIYA (Leader of the House).—When so many members are asking for it, what can I do, Sir?

Mr. SPEAKER.—All right. The House will now rise for the day and meet again tomorrow at Twelve of the Clock.

The House adjourned at three minutes past Five of the Clock to meet again at Twelve of the Clock on Friday the 17th July 1953.

V3 31 N53
N54 9-29-41
(B) 4712

WD 4516—GPB—500—7-2-54